ಅಪೂರ್ವ ಭೆಟ್ಟಿ



ಗುರು ಶಿಷ್ಯರಲ್ಲಿ ಪ್ರಸನ್ನ ವಾರ್ತಾಲಾಪ

- ಎಂ. ಜಿ. ಪಾಟೀಲ.

ಪುಷ್ಪ : ಆರು

ಅಪೂರ್ವ ಭೆಟ್ಟಿ

ಮೂಲ ಲೇಖಕರು :

ಶ್ರೀ ಮಾಣಿಕಚಂದ ಜ. ಭೀಸೀಕರ
M.A, ನ್ಯಾಯತೀರ್ಥ
ಬಾಹುಬಲಿ (ಕೊಲ್ಹಾಪೂರ)

ಅನುವಾದಕರು :

ಶ್ರೀ ಎಂ. ಬಿ. ಪಾಟೀಲ
ಸೇಡಬಾಳ (ಬೆಳಗಾವಿ)

ಸನ್ಮತಿ ಪ್ರಕಾಶನ, ಬಾಹುಬಲಿ

APOORVA BHETTI
By M. J. Bhisikar

Translated by Shri M. B. Patil

Published by Sanmati Prakashan. Bahubali

First Edition – 1981

Pages- : 68 Price:–Rs. 1-50

ಮೊದಲನೆಯ ಮುದ್ರಣ : ಫೆಬ್ರುವರಿ ೧೯೮೧

ಪ್ರತಿಗಳು : ೩೦೦೦

ಪ್ರಕಾಶಕರು :

ಸನ್ಮತಿ ಪ್ರಕಾಶನ
ಬಾಹುಬಲಿ (ಕೊಲ್ಹಾಪುರ)
ಪಿನ್ : ೪೧೬೧೧೦

ಬೆಲೆ : ರೂ. ೧-೫೦

ಮುದ್ರಕರು :

ಬಾಬುರಾವ ಸಿ. ಪಾಟೀಲ
ಸನ್ಮತಿ ಮುದ್ರಣಾಲಯ
ಬಾಹುಬಲಿ (ಕೊಲ್ಹಾಪೂರ)

ಅರಿಕೆ

ವಿಶ್ವಧರ್ಮದ ಪ್ರೇರಕರೂ, ಭಾರತೀಯ ಸಂತ ಶ್ರೇಷ್ಠರಾದ ಪೂಜ್ಯ ಶ್ರೀ ಏಲಾಚಾರ್ಯ ವಿದ್ಯಾನಂದ ಮುನಿಮಹಾರಾಜರು ದಿನಾಂಕ ೨೦-೪-೧೯೮೦ ರಂದು ಬಾಹುಬಲಿ ಕ್ಷೇತ್ರಕ್ಕೆ ಆಗಮಿಸಿದ್ದರು. ಶ್ರೀ ಬಾಹುಬಲಿ ಕ್ಷೇತ್ರದಲ್ಲಿ ಪರಮ ಪೂಜ್ಯ ಏಲಾಚಾರ್ಯರು ಪರಮ ಪೂಜ್ಯ ಗುರುದೇವ ಸಮಂತಭದ್ರ ಮುನಿಮಹಾರಾಜರ ಸಾನಿಧ್ಯದಲ್ಲಿ ಎರಡುದಿನಗಳ ವರೆಗೆ ಧರ್ಮಾರಾಧನೆಯಲ್ಲಿ ಕಾಲಕಳೆದರು. ಸುದೀರ್ಘ ಕಾಲದ ನಂತರ ಗುರು-ಶಿಷ್ಯರ ಭೆಟ್ಟಿಯು ಸುಯೋಗವದು. ಗುರು-ಶಿಷ್ಯರಿಬ್ಬರು ಆನಂದಭರಿತರಾಗಿ ಧರ್ಮ ಮತ್ತು ಸಮಾಜದ ಉನ್ನತಿಯ ಬಗ್ಗೆ ಬಿಚ್ಚು ಮನಸ್ಸಿನಿಂದ ಚರ್ಚೆಮಾಡಿದರು. ಗುರು ಶಿಷ್ಯರ ಆ ಭವ್ಯ ದಿವ್ಯ ಸ್ಮೃತಿಯ ಚಿರಸ್ಮರಣೆಗಾಗಿ ಈ ಕೃತಿಯನ್ನು ಕನ್ನಡಿಗರ ಕೈಗಿಡುತ್ತಿದ್ದೇವೆ. ಗುರು-ಶಿಷ್ಯರಲ್ಲಿ ಜರುಗಿದ ಕುಶಲ ವಾರ್ತಾಲಾಪವನ್ನು ಪ್ರಪ್ರಥಮವಾಗಿ ಮರಾಠಿ ಸನ್ಮತಿಯಲ್ಲಿ ಪ್ರಕಟಿಸಿ ಶ್ರೀ ಮಾಣಿಕಚಂದ ಭೀಸೀಕರ ಗುರೂಜಿ ಅವರು ಬೆಳಕಿಗೆ ತಂದರು. ಶ್ರೀ ಭೀಸೀಕರ ಗುರೂಜಿ ಅವರ ಇಚ್ಛೆಗನುಸಾರವಾಗಿ ಆ ಮರಾಠಿ ಕೃತಿ ಕನ್ನಡ ರೂಪ ತಾಳಿದೆ.

ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿಕೊಡಬೇಕೆಂದು ನಮ್ಮ ಪರಮ ಮಿತ್ರರಾದ ಶ್ರೀ ಎಂ. ಬಿ. ಪಾಟೀಲ ಅವರನ್ನು ವಿನಂತಿಸಿಕೊಂಡೆವು. ಅವರು

ನಮ್ಮ ಸೂಚನೆಗೆ ಸಮ್ಮತಿಸಿ ಅನುವಾದ ಕಾರ್ಯವನ್ನು ಕೈಕೊಂಡ ಶ್ರಮವಹಿಸಿ ಸುಂದರ ಹಾಗೂ ಸರಳ ರೂಪದಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ ಶ್ರೀ ಎಂ. ಬಿ. ಪಾಟೀಲರು "ಮೋಕ್ಷ ಮಾರ್ಗ ಪ್ರಕಾಶಕ" ಗ್ರಂಥ ವನ್ನು ಕನ್ನಡದಲ್ಲಿ ಅನುವಾದಿಸಿ ಇದೀಗ ಓದುಗರ ಕೈ ಯಲ್ಲಿ ಕೊಟ್ಟು ಕನ್ನಡಿಗರಿಗೆ ಸುಪರಿಚಿತರಾಗಿದ್ದಾರೆ. ಸುಂದರವಾಗಿ ಅನುವಾದಿಸಿದ ಶ್ರೀ ಎಂ. ಬಿ. ಪಾಟೀಲ ಅವರಿಗೆ ನಮ್ಮ ಕೃತಜ್ಞತೆಗಳು.

ಭಗವಾನ್ ಬಾಹುಬಲಿ ಮಹಾಮೂರ್ತಿಯ ಸಹಸ್ರಾಬ್ದಿ ಮಹೋತ್ಸವ ಹಾಗೂ ಮಹಾಮಸ್ತಕಾಭಿ ಷೇಕ ಸಮಾರಂಭಗಳ ಅಪೂರ್ವ ಯೋಗದ ಈ ಶುಭ ಸಂದರ್ಭದಲ್ಲಿ ಈ ಚಿಕ್ಕ ಕೃತಿ ಪ್ರಕಟವಾಗಿ ಕನ್ನಡಿಗರ ಕೈಸೇರುತ್ತಿರುವುದು ನಮ್ಮೆಲ್ಲರ ಸೌಭಾಗ್ಯ. ಈ ಕಿರು ಕೃತಿಯಲ್ಲಿ ಮುನಿದ್ವಯರ ಅಂತರಾಳದಿಂದ ಹೊರ ಹೊಮ್ಮಿದ ಉದ್ಬೋಧಕ ವಿಚಾರಗಳನ್ನು ಓದುಗರು ತಮ್ಮ ಹೃದಯದಲ್ಲಿ ಅಳವಡಿಸಿಕೊಳ್ಳಲೆಂದು ಹಾರೈಸು ತ್ತೇವೆ.

ಬಾಹುಬಲಿ ಕ್ಷೇತ್ರ — ಪ್ರಕಾಶಕರು

೧೮-೨-೧೯೮೦
ಭಾರತ ಹುಣ್ಣಿಮೆ.

ಗುರು-ಶಿಷ್ಯರಲ್ಲಿ-

ಅಪೂರ್ವ ಭೆಟ್ಟಿ

ಶ್ರೀ ಬಾಹುಬಲಿ ಕ್ಷೇತ್ರದಲ್ಲಿಯ ಎರಡು ದಿವಸಗಳ ವಾಸ್ತವ್ಯದಲ್ಲಿ ಪರಮಪೂಜ್ಯ ಏಲಾಚಾರ್ಯ ಶ್ರೀ ವಿದ್ಯಾನಂದ ಮಹಾರಾಜರು ಹಾಗೂ ಪರಮ ಪೂಜ್ಯ ಗುರುದೇವ ಶ್ರೀ ಸಮಂತಭದ್ರ ಮಹಾರಾಜರಲ್ಲಿ ಧರ್ಮ ಹಾಗೂ ಸಮಾಜೋನ್ನತಿ ಮೊದಲಾದ ಹಲವಾರು ವಿಷಯಗಳ ಮೇಲೆ ಕುಶಲ ಹಾಗೂ ಮುಕ್ತ ಮನಸ್ಸಿನ ಮಾತುಕತೆಗಳಾದವು. ಅವುಗಳಲ್ಲಿನ ಮಹತ್ವದ ಕೆಲ ಭಾಗವನ್ನಿಲ್ಲಿ ಸಂಗ್ರಹಿಸಿಕೊಡಲಾಗುವುದು. ಪ. ಪೂ. ವಿದ್ಯಾನಂದ ಮಹಾರಾಜರು ಮೊದಲು ಕ್ಷು. ಪಾರ್ಶ್ವಕೀರ್ತಿಗಳಾಗಿದ್ದಾಗ ಅಧ್ಯಯನಕ್ಕಾಗಿ ಕೆಲ ಕಾಲದವರೆಗೆ ಬಾಹುಬಲಿ ಆಶ್ರಮದಲ್ಲಿದ್ದರು. ಆಗ ಪ. ಪೂ. ಗುರುದೇವರ ಹತ್ತಿರ ಇಷ್ಟೋಪದೇಶ, ಕ್ಷತ್ರಚೂಡಾಮಣಿ ಮೊದಲಾದ ಮನುಷ್ಯ ಜೀವನವನ್ನೇ ಬೆಳಗುವ ಗ್ರಂಥಗಳ ಅಭ್ಯಾಸವನ್ನವರು ಮಾಡಿದ್ದರು. ಮತ್ತು ಬ್ರ. ಮಾಣಿಕಚಂದ, ಮೋಹೋಳಕರ, ವಾಲಚಂದ ಹಾಗೂ ಸಹೋದರಿ ಗಜಾಬೆನ್ ಇವರುಗಳಿಂದ ದ್ರವ್ಯ ಸಂಗ್ರಹ, ಸಿದ್ಧಾಂತ ಪ್ರವೇಶಿಕೆ, ಛಹಢಾಲ ಮೊದಲಾದ ಗ್ರಂಥಗಳ ಅಭ್ಯಾಸವನ್ನೂ ಮಾಡಿದ್ದರು. ಈ ಘಟನೆ

ಯಾದ ನಂತರ ಸುಮಾರು ೨೫ ವರ್ಷಗಳು ಕಳೆದ ಮೇಲೆ ಅವರಿಗೆ ಬಾಹುಬಲಿ ಕ್ಷೇತ್ರ ಹಾಗೂ ಪ. ಪೂ. ಗುರುದೇವರ ದರ್ಶನವಾಗುತ್ತಿರುವುದರಿಂದ ಆನಂದವು ತುಂಬಿಹರಿಯುತ್ತಿತ್ತು.

ಪ. ಪೂ. ಗುರುದೇವರ ಕ್ಷೇಮ ಕುಶಲತೆಗಳನ್ನು ವಿಚಾರಿಸಿದನಂತರ ಇಲ್ಲಿಯ ಎಲ್ಲ ಪರಿಸರವು ಮಂಗಲ ಮಯವೂ ಪ್ರೇಕ್ಷಣೆಯವೂ ಆದ ಬಗ್ಗೆ ತಮ್ಮ ಮೆಚ್ಚುಗೆ ಯನ್ನು ವ್ಯಕ್ತಪಡಿಸುತ್ತ ಪೂ. ವಿದ್ಯಾನಂದರೆನ್ನುತ್ತಾರೆ–
"ಮಹಾರಾಜರೇ, ಈ ಬಾಹುಬಲಿಯು ತಮ್ಮ ತಪೋಭೂಮಿಯೂ, ಜ್ಞಾನಭೂಮಿಯೂ, ಕರ್ಮ ಭೂಮಿಯೂ ಆಗಿದೆ. ಇಲ್ಲಿ ತಾವು ಬಹಳ ಕಾಲದಿಂದ ಆತ್ಮಧ್ಯಾನದೊಡನೆ ಜ್ಞಾನದಾನದ ಯಾವ ಪ್ರಚಂಡ ಕಾರ್ಯವನ್ನು ಮಾಡಿದ್ದೀರಿ ಇದಕ್ಕೆ ಸರಿದೊರೆಯಾದ ಇಷ್ಟು ಹಿರಿಯ ಹಾಗೂ ಒಳ್ಳೆಯ ಗುರುಕುಲವು ಈ ಭಾರತ ಭೂಮಿಯಲ್ಲಿ ಇನ್ನೆಲ್ಲೂ ಇಲ್ಲವೆಂದರೆ ಯಾವ ಅತಿಶಯೋಕ್ತಿಯೂ ಎಣಿಸಲಾಗದು."

"ಅದಕ್ಕೆ ಬೇಕು ? ಇದೆಲ್ಲವು ಸಮಾಜದ ಕರ್ತವ್ಯದಿಂದಾದ ಒಳ್ಳೆಯಫಲವಿದೆ. ಇದರೊಳಗೆ ಮಹಾರಾಜರದೇನಿದೆ ? ಏನೆಲ್ಲ ಆಗಿದೆ ಅದೆಲ್ಲವೂ (ಶ್ರೀ ತಾತ್ಯಾ ಅವರ ಕಡೆಗೆ ಸನ್ನೆಮಾಡಿ) ಈ ಕಾರ್ಯ

ಕರ್ತರ ತ್ಯಾಗದಿಂದ ಹಾಗೂ ಸಮಾಜದ ಔದಾರ್ಯದಿಂದ ಆಗಿದೆ. ಮತ್ತು ಇನ್ನೂ ಮುಂದೆ ತಮ್ಮಂಥ ಜ್ಞಾನಸಂಪನ್ನ ಯೋಗಿಗಳು ಮನಸ್ಸಿನ ಮೇಲೆ ತೆಗೆದುಕೊಂಡರೆ ಇದಕ್ಕಿಂತಲೂ ಹೆಚ್ಚು ಒಳ್ಳೆಯದಾಗುತ್ತ ಹೋಗಬಹುದು. ಅದಕ್ಕಾಗಿ ತಾವು ತಮ್ಮ ಯೋಗವನ್ನು ಇನ್ನು ಮೇಲೆ ಉತ್ತರಕ್ಕಿಂತ ದಕ್ಷಿಣ ಪ್ರಾಂತದಲ್ಲಿ ಹೆಚ್ಚಾಗಿ ಕೊಡಬೇಕಾಗುವುದು."

ಏಲಾಚಾರ್ಯ :- ಇದೇ ಭಾಗದಲ್ಲಿ ವರ್ಷಾಯೋಗವನ್ನು ಕಳೆಯಬೇಕೆಂಬ ಇಚ್ಛೆಯಿತ್ತು ಆದರೆ ಮುಂದಿನ ವರುಷವೇ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ಭಗವಂತರ ಸಹಸ್ರಾಬ್ಧಿಯ ಮಹಾಮಸ್ತಕಾಭಿಷೇಕವು ಇರುವುದರಿಂದ ಅಲ್ಲಿಗೆ ಬೇಗನೆ ತಲುಪುವುದು ಅತ್ಯಾವಶ್ಯಕವೆನಿಸಿದೆ."

ಗುರುದೇವ :- ಸರಿಯಾಗಿದೆ; ಆದರೆ ಅದಾದ ನಂತರವಾದರೂ ಮಹಾರಾಜರ ಇಚ್ಛೆಯನ್ನು ಯಾವಾಗ ಪೂರ್ಣಮಾಡುವಿರಿ ? ಈಗ ಶರೀರವು ಸೋತು ಹೋಗಿದೆ ಎಲೆಯು ಹಣ್ಣಾಗಿದೆ ಯಾವಾಗ ಉರಿದು ಬೀಳುತ್ತದೋ ಅದು ಹೇಳಲಿಕ್ಕೆ ಬರುವಂತಿಲ್ಲ.

ಏಲಾಚಾರ್ಯ :- ನಾನು ಇಂದೂರಿನಲ್ಲಿದ್ದಾಗಲೇ ತಮ್ಮ ಪ್ರಕೃತಿಯ ವಿಷಯವಾಗಿ ತಿಳಿದಿತ್ತು. ಆಗಿನಿಂದಲೇ ತಮ್ಮ ದರ್ಶನ ಪಡೆಯಬೇಕೆಂಬ ಇಚ್ಛೆ

ಮನಸ್ಸಿನಲ್ಲಿ ಬಲವಾಗಿತ್ತು. ಅದು ಇಂದು ಸಂಭವಿಸಿತು. ಅದರಿಂದಾಗಿ ಹೆಚ್ಚಾದ ಆನಂದವಾಗಿದೆ. ಈಗ ತಮ್ಮ ಸ್ಥಿತಿಯು ಅತ್ಯಂತ ಸೂಕ್ಷ್ಮವಾಗಿದೆ ತಾಯಿಯು ಎಳೆಯ ಮಗುವನ್ನು ಜೋಪಾನ ಮಾಡುವಂತೆ ಈಗ ತಮ್ಮ ಆರೈಕೆಯಾಗುವ ಅವಶ್ಯಕತೆಯಿದೆ. 'ರಯಣಸಾರ' ಗ್ರಂಥದಲ್ಲಿ ಭಗವಾನ್ ಕುಂದ ಕುಂದ ದೇವರು ಹೀಗೆ ಹೇಳುತ್ತಾರೆ, 'ಎಳೆಯ ಮಗುವು ಹುಟ್ಟಿದ ಕೂಡಲೆ ಎಷ್ಟು ಕೋಮಲವಾಗಿರುತ್ತದೆ! ತಾಯಿಯಾದವಳು ಅದರ ಸೇವೆ, ಸುಶ್ರೂಷೆಯನ್ನು ಎಷ್ಟು ದಕ್ಷತೆಯಿಂದ ಮಾಡುತ್ತಾಳೆ! ಅದೇ ಪ್ರಕಾರದ ಸೇವೆ-ಸುಶ್ರೂಷೆಯು ವೃದ್ಧಮುನಿಗಳದೂ ಕೂಡ ಆಗಬೇಕು ಎಂದರೆನೇ ತ್ಯಾಗಿಗಳ ನಿರ್ಮಾಣವಾಗಬಹುದು ಹಾಗೂ ಅವರ ಪರಂಪರೆಯೂ ಉಳಿಯಬಹುದು.

ಗುರುದೇವರು :-- ಆ ಮಾತು ನಿಜವಾಗಿದೆ. ಈ ದೃಷ್ಟಿಯಿಂದ ದಕ್ಷಿಣ ಪ್ರಾಂತವು ನಿಜವಾಗಿಯೂ ಅನುಕೂಲವಾಗಿದೆ. ಈ ಭಾಗದ ಶ್ರಾವಕ-ಶ್ರಾವಿಕೆಯರು ಅತ್ಯಂತ ಭದ್ರ ಹಾಗೂ ಸರಳ ಸ್ವಭಾವದವರಾಗಿದ್ದಾರೆ. ಎಂಥ ತ್ಯಾಗಿಯೇ ಬರಲಿ ಮತ್ತು ಅವರು ಎಷ್ಟೇ ಜನರಿರಲಿ ಅವರ ಸೇವೆ-ಸುಶ್ರೂಷೆಯನ್ನು ಮಾಡುತ್ತಾರೆ. ಅವರ ದೋಷಗಳನ್ನು ನೋಡದೆ ಭಕ್ತಿಯಿಂದ ಒಂದೆರಡು ತುತ್ತು ಅನ್ನ ಹಾಕುತ್ತಾರೆ. ಕೊನೆಯವರೆಗೆ ಒಳ್ಳೆಯ ರೀತಿಯಿಂದ

ಅವರ ಆರೈಕೆ ಮಾಡುವಷ್ಟು ಭದ್ರ ಪರಿಣಾಮವುಳ್ಳವರೂ ಮತ್ತು ಅಷ್ಟೇ ಉದಾರ ಅಂತಃಕರಣವುಳ್ಳವರೂ ಆಗಿದ್ದಾರೆ. ಅದಕ್ಕಾಗಿ ತಗಲುವ ಖರ್ಚಿಗೆ ಅವರು ಹಿಂದೆಮುಂದೆ ನೋಡುವಂಥವರಲ್ಲ.

ಏಲಾಚಾರ್ಯ :– ಪಂ. ಆಶಾಧರರು ಇಂಥ ಭದ್ರ ಪರಿಣಾಮವುಳ್ಳವರ ಅಭಿನಂದನೆಯನ್ನೇ ಮಾಡಿದ್ದಾರೆ. ಬಂಗಾರವು ಸಿಕ್ಕದಿದ್ದರೆ ಹೋಗಲಿ ಬಂಗಾರ ಬೆರೆತ ಮಣ್ಣಾದರೂ ಸಿಕ್ಕುತ್ತದಲ್ಲ! ಅದೂಕೂಡ ಎಷ್ಟು ಉಪಯೋಗವಿದೆ.

ಗುರುದೇವ :– ಇಲ್ಲಿಯ ನೆಲವೇ ಅಂಥದ್ದಿದೆ ಏನನ್ನು ಬಿತ್ತುತ್ತೇವೆಯೋ ಅದನ್ನು ಫಲವತ್ತಾಗಿ ಬೆಳೆಯುತ್ತದೆ. ಅದಕ್ಕಾಗಿಯೇ ಈ ನಾಡಿನಲ್ಲಿ ಈ ಗುರುಕುಲ ಸಂಸ್ಥೆಯನ್ನು ಪ್ರಾರಂಭಿಸುವ ಹಾಗೂ ಅದರ ಸಲುವಾಗಿ ಹೆಚ್ಚಾದ ಶಕ್ತಿಯನ್ನು ಹಚ್ಚುವ ವಿಚಾರವಾಯಿತು. ಇಲ್ಲಿಯ ಸಮಾಜವು ತುಂಬಾ ಶ್ರದ್ಧೆಯುಳ್ಳದ್ದಿದೆ ಧರ್ಮದ ಸಲುವಾಗಿ ಎಂಥ ತ್ಯಾಗಕ್ಕೂ ಸಿದ್ಧವಿದೆ. ಆದರೆ ಅದಕ್ಕೆ ಸಮೀಚೀನ ಜ್ಞಾನದ ಅವಶ್ಯಕತೆಯಿದೆ. ತ್ಯಾಗಿ ತಪಸ್ವಿಗಳು ಈ ದೃಷ್ಟಿಯಿಂದ ಹೆಚ್ಚು ಪ್ರಯತ್ನಮಾಡಬೇಕಾಗಿದೆ. ತಾವು ಸ್ವತಃ ಜ್ಞಾನಸಂಪನ್ನರಾಗಿ ಸಮಾಜಕ್ಕೆ ಸರಿಯಾದ ನಿಜವಾದ ದೃಷ್ಟಿ ಜ್ಞಾನವನ್ನು ಕೊಡಬೇಕಾಗಿದೆ.

ಏಲಾಚಾರ್ಯ – ಈ ತಮ್ಮ ಹೇಳಿಕೆಯು ತುಂಬಾ ಸತ್ಯವಾಗಿದೆ! ಆಚಾರ್ಯ ಅಮಿತಗತಿಗಳು 'ಸುಭಾ

ಷಿತ ರತ್ನಸಂದೋಹ' ದಲ್ಲಿ ಹೀಗೆ ಹೇಳುತ್ತಾರೆ- 'ಎಲೈ ತ್ಯಾಗಿಯೇ, ನೀನು ಶ್ರಾವಕರ ಕಡೆಯಿಂದ ಕೊನೆಯ ಪಕ್ಷ ಕಮಂಡಲ ವಿನಲ್ಲಿ ನೀರನ್ನಾಗಲಿ, ಹಾಸಿಕೊಳ್ಳುವುದಕ್ಕೆ ಚಾಪೆಯನ್ನಾಗಲಿ ತಗೆದು ಕೊಳ್ಳುತ್ತಿರುವೆ ಅಲ್ಲದೆ ಆಹಾರ ಔಷಧ ಶಾಸ್ತ್ರದಾನ ಮೊದಲಾದ ಹಲವು ಪ್ರಕಾರದ ನೆರವು ಪಡೆದು ಕೊಳ್ಳುತ್ತಿರುವೆ. ಈ ಎಲ್ಲ ಸಾಲಗಳನ್ನು ತೆಗೆದು ಕೊಂಡು ನೀನು ಸ್ವರ್ಗ-ಮೋಕ್ಷಗಳಿಗೆ ಹೋಗು ವುದು ಹೇಗೆ ಸಾಧ್ಯವಿದೆ? ಆದಕ್ಕಾಗಿ ಅವರಿಂದ ಏನನ್ನು ಪಡೆದುಕೊಳ್ಳುತ್ತಿರುವೆಯೋ ಅದೆಲ್ಲ ವನ್ನು ಬಡ್ಡಿ ಸಹಿತವಾಗಿ ಮರಳಿ ಒಪ್ಪಿಸು!' ಎಂದು ಅದಕ್ಕಾಗಿಯೇ ನಾನು ದಿನಾಲು ಬೆಳಿಗ್ಗೆ ಮತ್ತು ಮಧ್ಯಾನ್ಹ ಪ್ರವಚನವಿತ್ತು ಪ್ರತಿ ದಿವಸ ಬಡ್ಡಿ ಸಹಿತವಾಗಿ ಮರಳಿ ಒಪ್ಪಿಸುವೆ.

ನಾ. ಭೀಸೀಕರ :- ಪ್ರವಚನವಲ್ಲಿ ಮಹಾರಾಜರು ಹಾಗೆ ಹೇಳುತ್ತಾರೆ ಕೂಡ, ದಿನದ ಸಾಲದ ಭಾರ ವನ್ನು ಶಿಲ್ಲಕ ಇಟ್ಟುಕೊಳ್ಳುವುದು ಒಳ್ಳೆಯದಲ್ಲ ವೆನ್ನುತ್ತಾರೆ.

ಗುರುದೇವ :- ತ್ಯಾಗಿಗಳ ಜೀವನವನ್ನು ಸುಧಾರಿಸು ವುದಕ್ಕಾಗಿಯೂ ಬಹಳಷ್ಟು ಪ್ರಯವನ್ನು ನಡೆಯು ಬೇಕಾಗಿದೆ. ಶ್ವೇತಾಂಬರ ಸಾಧುಗಳ ಪರಂಪರೆಯಲ್ಲಿ ಹೇಗೆ ಮೊದಲು ಐದು ವರ್ಷಗಳ ವರೆಗೆ ತಮ್ಮ

ಸಂಘದಲ್ಲಿಟ್ಟುಕೊಂಡು ಅವರಿಗೆ ಶಿಕ್ಷಣ ಕೊಡು ತ್ತಾರೆ. ಅಪ್ಪಾದ ನಂತರವೇ ದೀಕ್ಷೆ ಕೊಡಲಾಗು ತ್ತದೆ; ಇಲ್ಲದಿದ್ದರೆ ಹಾಗೆ ಸಾಧುಗಳು ದೀಕ್ಷೆಯನ್ನೇ ಕೊಡುವದಿಲ್ಲ, ಹಾಗೆ ನಮ್ಮಲ್ಲಿ ಆಗುವದಿಲ್ಲ, ಹೋಗಲಿ, ಕೊನೆಯ ಪಕ್ಷ ದೀಕ್ಷೆ ಸ್ವೀಕರಿಸಿದ ಮೇಲಾದರೂ ಅವರು ಪ್ರಯತ್ನಪಟ್ಟು ಜ್ಞಾನ ವನ್ನು ಬೆಳೆಸಿಕೊಳ್ಳಬೇಕು ಎಂದರೆನೇ ಜಿನ ಧರ್ಮದ ಉಜ್ವಲವಾದ ಪರಂಪರೆಯು ಸ್ಥಿರ ವಾಗಿ ಉಳಿದೀತು ಇಲ್ಲದಿದ್ದರೆ ಅದು ಹೇಗೆ ಉಳಿ ಯುವ ಸಾಧ್ಯತೆಯುದೆ ?

ಏಲಾಚಾರ್ಯ :– ನಾವಂತೂ ಇದನ್ನೇ ಮಾಡಿದ್ದೇವೆ. ಕ್ಷುಲ್ಲಕ ದೀಕ್ಷೆ ಸ್ವೀಕರಿಸಿ ಸುಮಾರು ಹನ್ನೊಂದು ತಿಂಗಳುಗಳಾಗಿರಬೇಕು. ಆಗ ಶೇಡಬಾಳದಲ್ಲಿ ನಡೆ ಯುತ್ತಿದ್ದ ಪಂಚಕಲ್ಯಾಣ ಪ್ರತಿಷ್ಠೆಯಲ್ಲಿ ತಾವು ಬಂದಿದ್ದಿರಿ ಆಗ ನನ್ನಲ್ಲಿರುವ ಜ್ಞಾನಲಾಲಸೆಯನ್ನು ಕಂಡು ತಾವು ಕೂಡಲೇ ಉದಾರ ಅಂತಃಕರಣದಿಂದ ನನ್ನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಬಂದು ಜ್ಞಾನಾಮೃತವನ್ನಿತ್ತಿರಿ, ತಾಯಿಯಂತಿರುವ ಗಜಾ ಬೆನ್ನರು ಆಹಾರದ ವ್ಯವಸ್ಥೆಯನ್ನು ನೋಡಿ ಕೊಂಡರು, ಮೋಹೋಳಕರ, ವಾಲಚಂದ ಮೊದ ಲಾದ ಆಗಿನ ಗುರುಗಳು ಎಷ್ಟೋ ಪಾಠಗಳನ್ನು ಹೇಳಿಕೊಟ್ಟಿದ್ದಾರೆ. ಯಾವ ತಾಯಿ–ತಂದೆಗಳೂ

ಕೂಡ ತಮ್ಮ ಮಕ್ಕಳಮೇಲೆ ಮಾಡದಷ್ಟು ಪ್ರೇಮ ವನ್ನು ತಾವೆಲ್ಲರೂ ಮಾಡಿದ್ದೀರಿ. ಅದರಿಂದಲೇ ಪ್ರೇರಣೆ ಪಡೆದು ಮುಂದೆ ಪುಣೆ ಹಾಗೂ ಕಲಕತ್ತೆ ಗಳಲ್ಲಿರುವ ವಿಶಾಲವಾದ ಗ್ರಂಥಾಲಯಗಳ ಲಾಭ ವನ್ನು ಪಡೆಯುವಂತಾಯಿತು. ಮತ್ತು ಈಗಲೂ ಕೂಡ ಎಲ್ಲಿ ಏನು ದೊರಕುತ್ತದೆ ಅಲ್ಲಿಂದ ಅದನ್ನು ತೆಗೆದುಕೊಂಡು ಸಂಗ್ರಹದಲ್ಲಿಡುವ ಪ್ರಯತ್ನವು ಸತತವಾಗಿ ನಡೆದಿರುತ್ತದೆ. ಈಗಲಂತೂ ಅದೊಂದು ಚಟವೇ ಆಗಿ ಬಿಟ್ಟಿದೆ.

ಗುರುದೇವ :– ಇದಂತೂ ಬಹು ಉತ್ತಮವಿದೆ. ಇನ್ನು ತಮ್ಮದೆ ಉಪಾದಾನವಿತ್ತು, ನಾವೇನು ಕೇವಲ ನಿಮಿತ್ತಮಾತ್ರವಾಗಿದ್ದೇವೆ. ಉತ್ತರ ಭಾರತ ದಲ್ಲಿದ್ದುಕೊಂಡು ತಾವು ತಮ್ಮ ಗುಣದ ಪ್ರಗತಿ ಯನ್ನು ಬಹಳವಾಗಿ ಮಾಡಿಕೊಂಡಿದ್ದೀರಿ ಇದರಲ್ಲಿ ಯಾವ ಸಂದೇಹವೂ ಇಲ್ಲ. ತಮ್ಮ ಪ್ರವಚನಗಳು ಅತ್ಯಂತ ಸುಂದರವೂ ಬೋಧಪ್ರದವೂ ಹಾಗೂ ಹೃದಯಸ್ಪರ್ಶಿಯೂ ಆಗಿರುತ್ತವೆಂಬುದನ್ನು ಎಷ್ಟೋ ಜನರಿಂದ ಕೇಳಿದ್ದೇವೆ ಮಹಾರಾಜರಿಗೂ ಒಮ್ಮೆ ಅಂಥ ಪ್ರವಚನವನ್ನು ಕೇಳಿಸಬೇಕು. ಇಂಥ ಅದ್ಭುತ ಶಕ್ತಿಯನ್ನು ತಾವು ಎಲ್ಲಿಂದ ಸಂಪಾದಿಸಿ ಕೊಂಡಿರಿ ?

ವಿಲಾಚಾರ್ಯ :– ತಮ್ಮದೇ ಆದ ಆಶೀರ್ವಾದದಿಂದ ತಾವು ಕ್ಷತ್ರಚೂಡಾಮಣೀ (ಜೀವಂಧರ ಚರಿತ್ರೆ)

ಕಾವ್ಯವನ್ನು ಹೇಳಿಕೊಡುತ್ತಿರುವಾಗ ಮನುಷ್ಯ ಜೀವನವನ್ನೇ ತಿದ್ದುವ ಸುಂದರವೂ ಬೋಧಪ್ರದವೂ ಆದ ಯಾವ ಪಾಠವನ್ನು ಹೇಳಿಕೊಟ್ಟಿದ್ದಿರಿ ಅದನ್ನೇ ವಿಸ್ತರಿಸಿ ನಾನು ಜನರಿಗೆ ಹೇಳುತ್ತಿರುತ್ತೇನೆ. ಅದರಲ್ಲಿ ಹೊಸದೆನ್ನುವಂಥದೇನೂ ನನ್ನದಿಲ್ಲ. ಜ್ಞಾನದ ಕ್ಷೇತ್ರವು ಅತ್ಯಂತ ವಿಸ್ತಾರವಾಗಿದೆ. ತಮ್ಮ ಇಡೀ ಆಯುಷ್ಯವನ್ನೇ ಅದರ ಉಪಾಸನೆಯಲ್ಲಿ ಕಳೆದರೂ ಕೊರತೆಯೇ ಬೀಳಬಹುದು. ಅದಕ್ಕಾಗಿ ಪ್ರತ್ಯಕ್ಷವಾದ ಅನುಭವವೇ ಹೆಚ್ಚು ಬೆಲೆಯುಳ್ಳದ್ದಿದೆ ಅಷ್ಟೇ ನಿಜವಾಗಿ ಸಾತ್ವಿಕ ಜೀವನವೆನಿಸಿದೆ ಉಳಿದುದೆಲ್ಲವೂ ಜೊಳ್ಳಾಗಿದೆ, ನಿರರ್ಥಕವಾಗಿದೆ.

ಗುರುದೇವ :– ತಮ್ಮಿಂದಾಗಿ ಜೈನಧರ್ಮದ ಪ್ರಭಾವನೆಯು ಎಲ್ಲ ಕಡೆಗೆ ಹೆಚ್ಚಾಗಿ ಆಗುತ್ತಿರುವುದನ್ನು ನೋಡಿ ಮಹಾರಾಜರಿಗೆ ತುಂಬಾ ಸಂತೋಷವೂ ಎನಿಸುತ್ತದೆ. **ಈ ವರ್ತಮಾನ ಕಾಲದಲ್ಲಿ ತಮ್ಮಂಥ ಸಮಯದ್ಯೋತಕರೂ ಹಾಗೂ ಧರ್ಮಪ್ರಭಾವಕರೂ ಆದ ಸಾಧುಗಳು ಎಲ್ಲಿಯೋ ಒಬ್ಬಿಬ್ಬರೇ ದೊರಕಬಹುದು.** ತಮ್ಮ ಈ ಶಕ್ತಿಯು ಹೀಗೆಯೇ ವೃದ್ಧಿಸಲಿ ಮತ್ತು ತಮ್ಮ ನಿಮಿತ್ತದಿಂದ ಈ ಜಿನಧರ್ಮ ಪ್ರಭಾವನೆಯು ಹೆಚ್ಚು ಹೆಚ್ಚಾಗಿ ಆಗುತ್ತಿರಲೆಂಬುದೆ ನಮ್ಮ ಹೃದಯದ ಇಚ್ಛೆಯಾಗಿದೆ ಇನ್ನು ಮುಂದೆ ತಮ್ಮಂಥ ತಿಳುವಳಿಕೆಯುಳ್ಳ ಪ್ರಭಾವಶಾಲಿಯಾದ ಮುಕ್ತಾರರನ್ನು ನಿರ್ಮಾಣ

ಮಾಡುವ ಹೊಣೆಯುಂ ತಮ್ಮ ಮೇಲೆಯೇ ಇದೆ ಆ ದಿಸೆಯಲ್ಲಿ ತಾವು ಈಗಾಗಲೇ ಪ್ರಯತ್ನ ನಡೆಸಿರಬೇಕು.

ಏಲಾಚಾರ್ಯ :- ಅಹುದು, ಶ್ರವಣಬೆಳುಗೊಳ ಹಾಗೂ ಮೂಡಬಿದಿರೆಯ ಭಟ್ಟಾರಕರುಗಳನ್ನೂ ಮತ್ತು ಚಂದ್ರಭೂಷಣ, ವರಾಂಗ ಮೊದಲಾದ ಕ್ಷುಲ್ಲಕರನ್ನೂ ಸಿದ್ಧಪಡಿಸುತ್ತಿದ್ದೇವೆ. ಪ್ರವಚನಕ್ಕೆ ಮೊದಲು ಅವರಿಗೆ ಮಂಗಲಾಚರಣೆಯನ್ನು ಮಾಡಲಿಕ್ಕೆ ಹೇಳಿಸುತ್ತೇವೆ ಅಲ್ಲದೆ ಅಧ್ಯಯನವೂ ನಡೆದಿದೆ.

ಗುರುದೇವ :- ತುಂಬಾ ಒಳ್ಳೆಯ ಸಂಗತಿಯಾಗಿದೆ. ಇದೇ ಮಾರ್ಗದಿಂದಲೇ ಧರ್ಮ ಪರಂಪರೆಯು ಬದುಕಿರಲು ಸಾಧ್ಯವಿದೆ. ಪಂ. ಆಶಾಧರರು ಒಂದೆಡೆ ಹೀಗೆ ಹೇಳಿದ್ದಾರೆ–

ಜಿನಧರ್ಮಂ ಧರ್ಮಬಂಧು ಮನುಬದ್ಧುಮಪತ್ಯವತ್। ಯತಿನ್ ಜನಯಿತುಂ ಯಸ್ಯೇತ್ ತಥೋತ್ಕರ್ಷಯಿತುಂ ಗುಣೈಃ ॥ ಜಗದ್ಬಂಧುವೆನಿಸಿದ ಜಿನಧರ್ಮದ ಪರಂಪರೆಯನ್ನು ಜ್ಞಾನಿಗಳಾದಂಥ ಮುನಿಗಳೇ ಕಾಯ್ದುಕೊಂಡು ಬರಬಹುದು ಅದಕ್ಕಾಗಿ ಅಂಥ ಮುನಿಗಳನ್ನು ನಿರ್ಮಾಣಮಾಡುವ ಮತ್ತು ಇದ್ದ ಮುನಿಗಳಲ್ಲಿ ಅಂಥ ಗುಣಗಳನ್ನು ಹೆಚ್ಚಿಸುವ ಕರ್ತವ್ಯವು ತಮ್ಮನ್ನೇ ಅವಲಂಬಿಸಿದೆ

ಅದರಂತೆ ತಾವು ಈಗಾಗಲೇ ಆ ಕಾರ್ಯವನ್ನು ಮಾಡುತ್ತಿರುವುದು ತುಂಬಾ ಆನಂದದ ಸಂಗತಿಯಾಗಿದೆ.

ಇದರಂತೆಯೇ ಣಮೋಕಾರ ಮಹಾಮಂತ್ರದ ಪ್ರಚಾರವು ಮನೆ ಮನೆಯ ವರೆಗೂ ತಲುಪಬೇಕೆಂಬುದು ಮಹಾರಾಜರ ಬಯಕೆಯಾಗಿದೆ. ಅದು ಎಲ್ಲಿಯವರೆಗೆ ಆಗುವದಿಲ್ಲ, ಅದುವರೆಗೆ ಈ ದಕ್ಷಿಣ ಭಾಗದಲ್ಲಿ ಧರ್ಮವಾದರೂ ಹೇಗುಳಿಯಬಲ್ಲುದೆಂಬುದರ ಕಲ್ಪನೆಯೇ ಮಹಾರಾಜರಿಗೆ ಬಾರದಾಗಿದೆ. ಎಲ್ಲ ಪ್ರತಿಯೊಂದು ಊರಿನಲ್ಲಿ ನಾಲ್ಕೈದು ನೂರು ಜೈನರ ಮನೆಗಳಿವೆ ಅಲ್ಲಿ ನೂರಕ್ಕೆ ತೊಂಬತ್ತರಷ್ಟು ಜನರಿಗೆ ಕೇವಲ ಒಂದು ಶುದ್ಧವಾದ ಣಮೋಕಾರ ಮಂತ್ರ ಬರುವದಿಲ್ಲವೆಂದರೆ ಮತ್ತು ಅದರ ಅರ್ಥ ತಿಳಿಯುವದಿಲ್ಲವೆಂದರೆ ಇದಕ್ಕೇನೆನ್ನಬೇಕು ? ಈ ಕೆಲಸವನ್ನೂ ತಾವೀಗ ಮಾಡಲೇಬೇಕಾಗಿದೆ, ಒಂದು ವೇಳೆ ಮಹಾರಾಜರಿಗೇ ಶಕ್ತಿಯಿರುತ್ತಿದ್ದರೆ ಅವರು ಊರೂರು ತಿರುಗಿ ಈ ಕೆಲಸವನ್ನು ಮಾಡಬಹುದಿತ್ತು ಆದರೆ ಈಗ ಅವರಿಗೆ ಅಂಥ ಶಕ್ತಿಯುಳಿದಿಲ್ಲ. ಅದಕ್ಕಾಗಿಯೇ ತಮ್ಮಂಥ ಸಮರ್ಥರು ಈ ಕೆಲಸವನ್ನು ಮನಸ್ಸಿನ ಮೇಲೆ ತಗೆದುಕೊಳ್ಳಬೇಕಾಗಿದೆ. ಇದು ತ್ಯಾಗಿ ಜನರ ಕರ್ತವ್ಯವೇ ಆಗಿದೆ ಆದರೆ ಯಾರೂ ಅಷ್ಟೊಂದು ಲಕ್ಷ್ಯಕ್ಕೆ ತಂದುಕೊಳ್ಳುವದಿಲ್ಲ ಅದಕ್ಕಾಗಿ ಆಶ್ಚರ್ಯವೆನಿಸುತ್ತದೆ, ಕ್ರಿಶ್ಚನ್ನರು ಮನೆ

ಮನೆಗೆ ಹೋಗಿ ತಮ್ಮ ಧರ್ಮದ ಪ್ರಚಾರವನ್ನು ಹೇಗೆ ಮಾಡುತ್ತಾರೆ ಹಾಗೆ ನಾವೂ ಮಾಡಬೇಕಾಗಿದೆ. ಅಂಥ ಮಿಶ್ನರಿ ವೃತ್ತಿಯು ನಮ್ಮ ಮೈಯಲ್ಲಿ ತುಂಬಿ ಬರಬೇಕಾಗಿದೆ.

ಏಲಾಚಾರ್ಯ :– ದಿನಾಲು ಪ್ರವಚನವಾದ ನಂತರ ನಾನು ಎಲ್ಲರಕಡೆಯಿಂದಲೂ ಸಾಮೂಹಿಕವಾಗಿ ಣಮೋಕಾರ ಮಂತ್ರವನ್ನು ಹೇಳಿಸಿಕೊಳ್ಳುತ್ತೇನೆ ಅವರಲ್ಲಿ ಯಾರಾದರೂ ಹಾಗೆ ಹೇಳದಿದ್ದರೆ ನೀವು ಮುಂದಿನ ಜನ್ಮದಲ್ಲಿ ಮೂಕರಾಗುತ್ತೀರೆಂದು ಅವರಿಗೆ ತಿಳಿಸಿ ಪ್ರೇರಣೆ ಕೊಡುತ್ತೇನೆ. ಒಳ್ಳೆಯ ಗಾಯನದ ರೀತಿಯಲ್ಲಿ ಣಮೋಕಾರ ಮಂತ್ರವನ್ನು ಅನ್ನುತ್ತೇನೆ (ಭೀಸೀಕರರ ಕಡೆಗೆ ಹೊರಳಿ)ಏನು ಭೀಸೀಕರ ಗುರುಗಳೇ, ಇದನ್ನು ನೀವು ಮಹಾರಾಜರಿಗೆ ಹೇಳಿಲ್ಲವೇನು ?

ಗುರುದೇವ :– ಯಾರೂ ಹೇಳಿಯೇ ಇಲ್ಲ. ಇದು ಬಹಳೇ ಒಳ್ಳೆಯ ಸಂಗತಿಯಾಗಿದೆ.

(ಏಲಾಚಾರ್ಯರು **ಣಮೋ ಅರಹಂತಾಣಂ** ಎಂಬ ಗೀತವನ್ನು ಮಹಾರಾಜರ ಮುಂದೆ ಹಾಡಿ ತೋರಿಸಿದರು. ಅದನ್ನು ಕೇಳಿ ಮಹಾರಾಜರು 'ಉತ್ತಮ, ತುಂಬಾ ಚೆನ್ನಾಗಿದೆ' ಎಂದು ತಮ್ಮ ಸಂತೋಷವನ್ನೂ, ಮೆಚ್ಚುಗೆಯನ್ನೂ ವ್ಯಕ್ತಪಡಿಸಿದರು.)

ಏಲಾಚಾರ್ಯ :– 'ಜೀವಂಧರಕುಮಾರನು ಈ ಣಮೋಕಾರ ಮಂತ್ರವನ್ನು ನಾಯಿಗೆ ಹೇಳಿದನು, ಭ. ಪಾರ್ಶ್ವನಾಥರು ನಾಗ-ನಾಗಿಣಗಳಿಗೆ ಹೇಳಿದರು; ನಾವಂತೂ ಮನುಷ್ಯರಾಗಿದ್ದೇವೆ ನಮಗೆ ಅನ್ನಲಿಕ್ಕೆ ಬರುವದಿಲ್ಲವೆಂದರೆ, ಇನ್ನಲಿಕ್ಕೆ ಸಂಕೋಚವೆನಿಸುತ್ತದೆಂದರೆ ಇದು ಆಶ್ಚರ್ಯವಲ್ಲವೇನು ಆದಕ್ಕಾಗಿ ಇಲ್ಲಿ ಕೂಡಿದ ಜೈನ-ಇಜೈನರೆಲ್ಲರೂ ಅನ್ನಬೇಕು, ಉಚ್ಚ ಕಂಠದಿಂದ ಉಚ್ಚರಿಸಬೇಕು' - ಎಂಬ ಶಬ್ದಗಳಲ್ಲಿ ಜನರಿಗೆ ಹುರುಪು ಕೊಟ್ಟು ಅವರಿಂದ ಆ ಮಹಾ ಮಂತ್ರವನ್ನು ಹೇಳಿಸಿಕೊಳ್ಳುತ್ತೇನೆ.

ಗುರುದೇವ :– ತುಂಬಾ ಒಳಿತು! ಇದೇ ಆಗಬೇಕಾಗಿದ. ಪ್ರತಿಯೊಬ್ಬ ತ್ಯಾಗಿಯು ಈ ಕಾರ್ಯವನ್ನು ಸ್ಪರ್ಧೆಯಿಂದ ಮಾಡಬೇಕು.

ಏಲಾಚಾರ್ಯ :– ದಿಲ್ಲಿ ಮೊದಲಾದ ಹಲವಾರು ಆಕಾಶವಾಣಿ ಕೇಂದ್ರಗಳಿಂದ ಈ ಣಮೋಕಾರ ಮಂತ್ರದ ಮತ್ತು ಭಾವಪೂರ್ಣವಾದ ಧಾರ್ಮಿಕ ಭಜನೆಯ ರೆಕಾರ್ಡುಗಳನ್ನು ಪ್ರಸಾರ ಮಾಡುವ ವ್ಯವಸ್ಥೆಯು ಇತ್ತೀಚೆಗೆ ಆಗಿದೆ. ಅವುಗಳಲ್ಲಿ ಸಂಗೀತ ಣಮೋಕಾರದ ರೇಕಾರ್ಡದಲ್ಲಿ ಇಪ್ಪತ್ತೈದು ಜನರು ಹಾಡುತ್ತಾರೆ. ಬಹಳೇ ಚೆನ್ನಾಗಿದೆ, ಪ್ರಭಾವಶಾಲಿಯೂ ಆಗಿದೆ! ಸಾಮಾನ್ಯ ಜನರಲ್ಲಿ ಧರ್ಮದ ವಿಷಯವಾಗಿ ಆಸ್ಥೆ ಹಾಗೂ ಅಭಿರುಚಿಯು ಬೆಳೆಯು

ಬೇಕಾದರೆ ಸಂಗೀತದ ಉಪಯೋಗವು ತುಂಬಾ ಪರಿಣಾಮಕಾರಕವಾಗಿದೆ. ಇಲ್ಲಿ ಕೂಡ ಸಂಗೀತದ ಪರ್ವವನ್ನು ನಡೆಸಬೇಕು. ಧರ್ಮಪ್ರಚಾರದಲ್ಲಿ ಅದೂ ಒಂದು ಪ್ರಭಾವಶಾಲಿಯಾದ ಅಂಗವಾಗಿದೆ.

ಗುಣದೇವ :- ಯಾರು ಬೇಡೆನ್ನುತ್ತಾರೆ ? ಧರ್ಮ ಪ್ರಭಾವನೆಗಾಗಿ ಯಾವ ಯಾವುದನ್ನು ಮಾಡಬೇಕಾಗಿದೆ ಅವೆಲ್ಲವನ್ನೂ ಅವಶ್ಯವಾಗಿ ಮಾಡಬೇಕು. ಅದಕ್ಕೆ ಯಾರ ವಿರೋಧವಿದೆ? ಇದೆಲ್ಲವೂ ಇನ್ನು ತರುಣ ಪೀಳಿಗೆಯ ಕೆಲಸವಿದೆ.

ವಿಲಾಚಾರ್ಯ : ಈಗ್ಗೆ ಮೂರು ವರುಷದ ಮುಂಚೆ ಅಮೇರಿಕೆಯಲ್ಲಿ ಜರುಗಿದ ವಿಶ್ವಶಾಂತಿ ಸಮ್ಮೇಲನದಲ್ಲಿ ಭಾಗವಹಿಸಲು ಇಲ್ಲಿಂದ ಹದಿನಾರು ಜನರು ಹೋಗಿದ್ದರು. ಅವರು ಸಮ್ಮೇಲನದ ಪ್ರಾರಂಭಕ್ಕೆ 'ಣಮೋಕಾರ ಮಂತ್ರ', 'ಚತ್ತಾರಿ ಮಂಗಲಪಾಠ' ಮತ್ತು 'ಕ್ಷೇಮಂ ಸರ್ವ ಪ್ರಜಾನಾಂ' ಇವನ್ನು ಅರ್ಥಸಹಿತವಾಗಿ ಹೇಳಿದಾಗ ಎಲ್ಲರೂ ಅವನ್ನು ಕೇಳಿ ಪ್ರಭಾವಿತರಾಗಿದ್ದರು. ಸಿಂಗಪುರದ ಧರ್ಮ ಸಭೆಯಲ್ಲಿಯೂ ಇದೇ ಅನುಭವವಾಯಿತು. ಆಗ ಅಲ್ಲಿಯ ಜೈನ ಬಂಧುಗಳ ಕಣ್ಣುಗಳು ಆನಂದಾಶ್ರುಗಳಿಂದ ತುಂಬಿ ಬಂದಿದ್ದವು ಮೊನ್ನೆ ಮೊನ್ನೆಯೇ ಮೂಡಬಿದಿರೆಯ ಭಟ್ಟಾರಕರು ಅಮೇರಿಕೆಗೆ ಹೋದಾಗ ಅಲ್ಲಿಯೂ ಜೈನ ಗೀತೆಗಳ ರೆಕಾರ್ಡಗಳ

ಪ್ರಚಾರವು ಒಳ್ಳೆಯ ರೀತಿಯಾಗಿ ಆಗುತ್ತಿದ್ದುದು ಕಂಡುಬಂದಿದೆ. ಇತ್ತೀಚೆಗಂತೂ ಸುಂದರವಾದ ಭಾವಪೂರ್ಣ ಗೀತೆಗಳ ಮತ್ತು ಸಮಯಸಾರ, ಛಹಢಾಲಗಳ ಕ್ಯಾಸೆಟ್ಟುಗಳನ್ನು ಸಿದ್ಧಪಡಿಸಲಾಗಿದ್ದು ಅವುಗಳ ಪ್ರಚಾರವೂ ಸಾಕಷ್ಟು ಆಗುತ್ತಿದೆ. ಒಟ್ಟಿನಲ್ಲಿ ಸಂಗೀತವು ಧರ್ಮಪ್ರಚಾರಕ್ಕೆ ಸಾಕಷ್ಟು ಪೋಷಕವಾಗಿದೆಯೆಂಬ ಅನುಭವವು ಉಂಟಾಗುತ್ತಿದೆ.

ಗುರುದೇವ :- ತಾವು ಪ್ರವಚನದಲ್ಲಿ ಣಮೋಕಾರ ಮಂತ್ರದ ಜೊತೆಯಲ್ಲಿ ಸ್ವಾಧ್ಯಾಯದ ಮಹತ್ವವನ್ನೂ ಜನರ ಮನಸ್ಸಿನ ಮೇಲೆ ಚನ್ನಾಗಿ ಬಿಂಬಿಸುತ್ತಿರೆಂದು ಕೇಳಿದ್ದೇನೆ ಇದು ತುಂಬಾ ಒಳ್ಳೆಯ ಸಂಗತಿಯಾಗಿದೆ! ಜೈನರು ಜೈನರೆಂದೆನಿಸಿಕೊಂಡು ಬಾಳುವದಿದ್ದರೆ ಅವರಿಗೆ ದಿನಾಲು ದೇವದರ್ಶನ, ಧರ್ಮಗ್ರಂಥಗಳ ಸ್ವಾಧ್ಯಾಯವನ್ನು ಅವಶ್ಯವಾಗಿ ಮಾಡಬೇಕೆಂದು ಬಲವಂತವಾಗಿ ಹೇಳಬೇಕಾಗಿದೆ. ಮನುಷ್ಯನಿಗೆ ತನ್ನ ಜೀವನದಲ್ಲಿ ಶಾಂತಿ ಹಾಗೂ ಸಮಾಧಾನಗಳು ದೊರೆಯಬೇಕಾದರೆ ಇದೇ ಒಂದು ಶ್ರೇಷ್ಠ ಸಾಧನೆಯಾಗಿದೆ.

ಏಲಾಚಾರ್ಯ :- ಇದು ಪೂರ್ಣಸತ್ಯವಾಗಿದೆ. ನಾನು ಪ್ರತಿಯೊಂದು ಪ್ರವಚನದಲ್ಲಿ ಈ ಮಾತಿನ ಮೇಲೆ ಸಾಕಷ್ಟು ಭಾರ ಹಾಕುತ್ತೇನೆ. ಯಾವ ಪ್ರಕಾರ ಶರೀರಕ್ಕೆ ದಿನಾಲು ಅನ್ನಬೇಕಾಗುತ್ತದೆ ಅದೇ

ಪ್ರಕಾರ ಮನಸ್ಸಿಗೂ ಆತ್ಮಕ್ಕೂ ಅನ್ನಬೇಕಲ್ಲವೇ. ಅವನ್ನು ಉಪವಾಸವಿಟ್ಟರೆ ನಡೆಯುತ್ತದೆಯೇ ? ಅದಕ್ಕಾಗಿ ಒಳ್ಳೆಯ ವಿಚಾರವೇ ಅವುಗಳ ಪೌಷ್ಟಿಕಾನ್ನವಾಗಿದೆ. ಮತ್ತು ಅದು ಸ್ವಾಧ್ಯಾಯದಿಂದಲೇ ದೊರೆಯುವ ಸಾಧ್ಯತೆಯಿದೆ'-ಎಂದು ಹೇಳುತ್ತಿರುತ್ತೇನೆ **ಈ ವರ್ತಮಾನ ಕಾಲದಲ್ಲಿ ಸ್ವಾಧ್ಯಾಯವೊಂದು ಶ್ರೇಷ್ಠತರವಾದ ಅಮೃತವಾಗಿದೆ. ಅದರ ಸ್ವಾದವು ಅದನ್ನು ಕುಡಿಯುವವರಿಗೇ ಬರುವುದು!**

'ತಾಯಿಯು ಮಗುವಿಗೆ ಜನ್ಮವನ್ನೇನೋ ಕೊಡುತ್ತಾಳೆ ಆದರೆ ಗುರುವು ಅವನಿಗೆ ಜ್ಞಾನವಿತ್ತು ಸುಸಂಸ್ಕೃತ ಮನುಷ್ಯನನ್ನಾಗಿ ಮಾಡುತ್ತಾನೆ. ತಮ್ಮ ಮರಿಗಳಿಗೆ ಜನ್ಮವನ್ನು ನಾಯಿ ಬೆಕ್ಕುಗಳೂ ಕೊಡುತ್ತವೆ. ಆದರೆ ಮಕ್ಕಳ ಮೇಲೆ ಒಳ್ಳೆಯ ಆಚಾರ-ವಿಚಾರಗಳ ಸಂಸ್ಕಾರ ಮಾಡುವುದು ಮಹತ್ವದ ಕರ್ತವ್ಯವಾಗಿದೆ. ಈ ಕಾರ್ಯವನ್ನು ಯಾವ ತಂದೆ-ತಾಯಿಗಳು ಮಾಡುತ್ತಾರೋ ಅವರೇ ನಿಜವಾದ ಪಾಲಕರಾಗುತ್ತಾರೆ. ಆ ಒಳ್ಳೆಯ ಸಂಸ್ಕಾರವು ಸ್ವಾಧ್ಯಾಯದಿಂದಲೇ ಆಗುತ್ತದೆ. ಅದನ್ನು ಬಿಟ್ಟರೆ ಮನುಷ್ಯರಲ್ಲಿ ಮತ್ತು ಪಶುಗಳಲ್ಲಿ ಯಾವ ಅಂತರವು ಉಳಿಯುತ್ತದೆ?' ಇದರ ವಿಷಯವಾಗಿ ಇಷ್ಟು ಕಠೋರ ಮಾತುಗಳನ್ನಾಡುತ್ತೇನೆ.

ಗುರುದೇವ :- ತರುಣ ವರ್ಗದ ಮೇಲೆ ನಿಜವಾದ ಜೈನತ್ವದ ಸಂಸ್ಕಾರವನ್ನು ಸಕಾಲದಲ್ಲಿ ಮಾಡದಿದ್ದರೆ ಅವರು ನಿಧಾನವಾಗಿ ತಮ್ಮ ಧರ್ಮ, ತತ್ತ್ವಜ್ಞಾನ, ಹಾಗೂ ಸಂಸ್ಕೃತಿಗಳನ್ನು ಮರೆತಲ್ಲದೆ ಹೇಗೆ ಉಳಿದಾರು? ಅದಕ್ಕಾಗಿ ಹೊಸದಾಗಿ ಜೈನರನ್ನು ಮಾಡುವ ಕಾರ್ಯವಂತೂ ದೂರವೇ ಇದೆ ಆದರೆ ಈಗಿದ್ದ ಜೈನರೇ ಜೈನರಾಗಿ ಹೇಗೆ ಉಳಿದಾರೆಂಬ ಬಗ್ಗೆ ಪ್ರಯತ್ನವು ಊರೂರಲ್ಲಿ ಆಗಬೇಕಾಗಿದೆ. ಇದಕ್ಕಾಗಿ ಉತ್ಸಾಹವುಳ್ಳ ತರುಣ ಕಾರ್ಯಕರ್ತರು ಮುಂದೆ ಬಂದು ಈ ಕೆಲಸವನ್ನು ಮನಸ್ಸಿನ ಮೇಲೆ ತಗೆದುಕೊಳ್ಳಬೇಕಾಗಿದೆ. ಡಾ. ಗುಂಡೆ, ದಿಗೆ, ದೇಸಾಯಿ ಮೊದಲಾದವರು ಮುಂದೆ ಕುಳಿತಿದ್ದಾರೆ ಅವರಿಗೆ ಇದನ್ನು ಹೇಳಿರಿ.

ವಿಲಾಚಾರ್ಯ :- ಮಹಾರಾಜರೇ, ಈ ತರುಣ ಮಂಡಳಿಯು ಕೊಲ್ಲಾಪುರದಲ್ಲಿ ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ. ಡಾಕ್ಟರ ಗುಂಡೆಯವರಂತೂ ಅತ್ಯಂತ ಪರಿಶ್ರಮವಹಿಸಿ ನವಯುವಕರ ಸುಂದರವಾದ ಸಂಘವನ್ನೇ ಮಾಡಿದ್ದಾರೆ.

ಮಾ ಭೀಸೀಕರ :- ದ.ಭಾ. ಜೈನ ಸಭೆಯವತಿಯಿಂದ 'ವೀರಸೇವಾದಲ' ವೆಂಬ ಹೆಸರಿನಿಂದ ಸಂಘಗಳನ್ನು ಹಳ್ಳಿಪಳ್ಳಿಗಳಲ್ಲಿ ಕಟ್ಟುತ್ತಿದ್ದಾರೆ. ಮತ್ತು ಅದಕ್ಕೆ

ಧರ್ಮದ ಸ್ವರೂಪವಿತ್ತು. ಪ್ರತಿಯೊಬ್ಬ ಸದಸ್ಯನು ದಿನಾಲು ದೇವದರ್ಶನ, ಮಂತ್ರಪಾಠ, ಸ್ವಾಧ್ಯಾಯ ಮೊದಲಾದವುಗಳನ್ನು ಮಾಡಲೇಬೇಕು ಮತ್ತು ಸಮಾಜ ಹಾಗೂ ಲೋಕೋಪಯೋಗದ ಕಾರ್ಯ ಗಳಲ್ಲಿ ಉತ್ಸಾಹದಿಂದ ಭಾಗವಹಿಸಲೇಬೇಕೆಂಬ ನಿಬಂಧ ನೆಯನ್ನೇ ಹಾಕಿಕೊಂಡಿದ್ದಾರೆ. ಆದರಿಂದ ಇಳಿ ಪ್ರದೇಶದ ಭಾಗಗಳಲ್ಲಿ ಒಂದು ಹೊಸ ಚೈತನ್ಯ ತುಂಬಿದ ವಾತಾವರಣವೇ ಮೂಡಿಬರುತ್ತಲಿದೆ.

ಗುರುದೇವ :– ಇದು ತುಂಬಾ ಒಳ್ಳೆಯ ಸಂಗತಿಯಾ ಗಿದೆ. ಇದು ಆಗಲೇಬೇಕು. ಮತ್ತು ಊರೂರಿಗೆ ಪಾಠಶಾಲೆಗಳು ಸ್ವಾಧ್ಯಾಯ ಮಂಡಳಗಳು ಆರಂಭ ವಾಗಲೇಬೇಕು. ಣಮೋಕಾರ ಮಂತ್ರವನ್ನು ಅನ್ನ ಲಿಕ್ಕೆ ಬಾರದವರು ಯಾರೂ ಉಳಿಯ ಕೂಡದು.

ಏಲಾಚಾರ್ಯ :– ಆದರೊಡನೆ,

"ಸಂಪೂಜಕಾನಾಂ ಪ್ರತಿಪಾಲಕನಾಂ, ಯತೀಂದ್ರ
ಸಾಮಾನ್ಯ ತಪೋಧನಾನಾಂ ।
ದೇಶಸ್ಯ ರಾಷ್ಟ್ರಸ್ಯ ಪುರಸ್ಯರಾಜ್ಞಃ, ಕರೋತು
ಶಾಂತಿಂ ಭಗವಾನ್ ಜಿನೇಂದ್ರಃ ॥"

ಈ ಶ್ಲೋಕವನ್ನೂ ಹೇಳಬೇಕು. ಇದರಲ್ಲಿ ಅಹಿಂ ಸೆಯ ವಿಚಾರವು ಅತ್ಯಂತ ವ್ಯಾಪಕವಾಗಿದೆ ಮತ್ತು

ವಿಶ್ವಕಲ್ಯಾಣದ ಉದಾತ್ತ ಭಾವನೆಯು ಅಡಕವಾಗಿದೆ. ನಾನು ದಿನಾಲೂ ಪ್ರವಚನದಲ್ಲಿ ಇದರ ವಿಷಯವಾಗಿ ಹೇಳುತ್ತಿರುತ್ತೇನೆ.

ಗುರುದೇವ :– ಚನ್ನಾಗಿದೆ! ಇದು ಬಹಳೇ ಸುಂದರವೂ ಅರ್ಥಪೂರ್ಣವೂ ಆದಶ್ಲೋಕವಾಗಿದೆ.

ಮುನಿ ಸುಶೀಲಾಚಾರ್ಯ :– ಗೋಳವಲಕರರು ದಿವಂಗತರಾದಾಗ ನಾನು ಮಥುರೆಯಲ್ಲಿದ್ದೆನು. ಆಗ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಾನೂರೈವತ್ತು ಕಾರ್ಯಕರ್ತರು ಸಮವಸ್ತ್ರದಲ್ಲಿ ನನ್ನೆಡೆಗೆ ಬಂದು 'ಗೋಳವಲಕರರ ಮರಣದಿಂದ ನಾವುಗಳು ತುಂಬಾ ದುಃಖಿತರಾಗಿದ್ದೇವೆ ಅವರ ಸಂಬಂಧವಾಗಿ ಒಂದೆರಡು ಮಾತುಗಳನ್ನು ಹೇಳಿರಿ'– ಎಂದರು. ಅವರ ಭಾವನೆ ಹಾಗೂ ಆಗ್ರಹಗಳನ್ನು ಕಂಡ ನಾನು ಅವರ ಮನಶ್ಶಾಂತಿಗಾಗಿ ಈ ಶ್ಲೋಕವನ್ನು ಹಾಗೂ ಅದರಲ್ಲಿರುವವ್ಯಾಪಕವಾದ ವಿಚಾರಗಳನ್ನು ವಿಸ್ತಾರದಿಂದ ಹೇಳಿದಾಗ ಅವರು 'ಎಲ್ಲಿಯದಿದೆ ಈ ಶ್ಲೋಕವು?' ಎಂದು ಕೇಳಿದರು, ಆಗ ಇದು ಜೈನ ಧರ್ಮದಲ್ಲಿ ದಿನದ ಸಾಮಾಯಿಕ ಪಾಠದಲ್ಲಿ ಬರುತ್ತದೆಂದೊಡನೆ ಅವರು 'ಜೈನ ಧರ್ಮವಂತೂ ಜಾತೀಯವಾದದ್ದಿದೆ, ಸಂಪೂರ್ಣ ರಾಷ್ಟ್ರದ ವಿಚಾರವನ್ನವರು ಎಲ್ಲಿಯೂ ಹೇಳಿಯೇ ಇಲ್ಲವೆಂದು ನಮ್ಮ ತಿಳಿವಳಿಕೆಯಾಗಿತ್ತು!' ಎಂದರು. ಅದಕ್ಕೆ ನಾನು ರಾಷ್ಟ್ರವನ್ನು

ನೀವಷ್ಟೇ ಕೊಂಡುಕೊಂಡಿದ್ದೀರೇನು? ಎಂದು ಕೇಳಿದ ಕೂಡಲೆ ಅವರೆಲ್ಲರೂ ಈ ಶ್ಲೋಕವನ್ನು ಬರೆದುಕೊಂಡು 'ನಾವು ಎಲ್ಲ ದೇಶಗಳಲ್ಲಿ ಇದರ ಪ್ರಚಾರ ಮಾಡುತ್ತೇವೆ. ಇಂಥ ಶ್ಲೋಕವು ನಮಗೆ ಈ ಮುಂಚೆ ಎಲ್ಲಿಯೂ ಕೇಳಲಿಕ್ಕೆ ಸಿಕ್ಕಿಲ್ಲ'- ಎಂದರು.

ಇನ್ನೂ ಒಂದು ಘಟನೆ ಹೀಗಿದೆ-

ಕಳೆದ ವರುಷ ನಾನು ದಿಲ್ಲಿಯಲ್ಲಿದ್ದೆನು. ಆಗ ಲೋಕಸಭೆಯ ಅಧ್ಯಕ್ಷರಾದ ಶ್ರೀ ಹೆಗ್ಗಡೆಯವರು ತಮ್ಮ ಪತ್ನಿಯೊಂದಿಗೆ ದರ್ಶನಕ್ಕೆಂದು ಬಂದರು. ಜೊತೆಯಲ್ಲಿ ಅವರ ಮಗಳಾದ 'ವಿಮಲಮ್ಮ'ಳೂ ಇದ್ದಳು. ಅವರು ಜೈನರು ಮತ್ತು ಮಗಳು ವೈಷ್ಣವಳು. 'ಇದು ಹೇಗೆ?' ಎಂದು ನಾನು ಸಹಜವಾಗಿ ಕೇಳಿದೆ ಆಗ ಸೌ. ಹೆಗ್ಗಡೆಯವರು ಹೀಗೆ ಹೇಳಿದರು, ನಾವು ಮೊದಲು ಜೈನರಾಗೇ ಇದ್ದೆವು ಯಾವುದೇ ಕಾರಣದಿಂದ ನಮ್ಮನ್ನು ಧರ್ಮದಿಂದ ಹೊರಕ್ಕೆ ಹಾಕಲಾಯಿತು. ಆಗ ನಾವು ವೈಷ್ಣವರಾದೆವು. ಆದಾಗ್ಯೂ ನಾವು ವರುಷದ ಮುನ್ನೂರಾ ಅರವತ್ತೈದು ದಿವಸಗಳಲ್ಲಿ ಒಂದು ದಿವಸವಾದರೂ ಜೈನ ಧರ್ಮವನ್ನು ಆಚರಿಸುತ್ತೇವೆ ಅದನ್ನು ಹೇಗೆ ಆಚರಿಸುತ್ತೀರಿ? ಎಂದು ಕೇಳಿದಾಗ ಅವರು 'ಆ ದಿವಸ ನಾವು ಶುದ್ಧವಾದ ಅಡಿಗೆಯನ್ನು ಮಾಡಿ ಣಮೋಕಾರ ಮಂತ್ರ ಮತ್ತೂ ಕೆಲವು ಪಾಠಗಳನ್ನು ಹೇಳುತ್ತೇವೆ

ಪೂರ್ವಜರಿಗೆ ನೈವೇದ್ಯ ತೋರಿಸಿ ಆನಂತರ ಊಟ ಮಾಡುತ್ತೇವೆ' ಎಂದು ಹೇಳಿದರು. ಅವರು ಹೇಳಿದ ಪಾಠಗಳಲ್ಲಿ ಈ ಶ್ಲೋಕವೂ ಮತ್ತೆ ಇನ್ನಿತರ ಶ್ಲೋಕ ಗಳೂ ಇದ್ದವು.

ಇನ್ನೂ ಒಂದು ಘಟನೆಯು ಸ್ಮರಣೆಗೆ ಬರುತ್ತ ದೆಂದು ಹೇಳುತ್ತೇನೆ

ಕ್ರಿ. ಶ. ೧೯೭೧ ರಲ್ಲಿ ನಾವು ವರ್ಷಾಯೋಗವನ್ನು ಇಂದೂರಿನಲ್ಲಿ ಕಳೆಯುತ್ತಿದ್ದೆವು. ಆಗ ಸುಮಾರು ೨೫೦೦ ಹರಿಜನರು ಗಾಂಧಿ ಶತಾಬ್ದಿಯ ಪ್ರಚಾರದ ನಿಮಿತ್ತವಾಗಿ ಬಂದವರು ದರ್ಶನಕ್ಕೆ ಬಂದಿದ್ದರು. ಅವರಲ್ಲಿ ಬೇರೆ ಕೆಲವರು ಸರ್ವೋದಯ ಕಾರ್ಯ ಕರ್ತರೂ ಇದ್ದರು ನಿಮಗೆ ಏನಾದರೂ ಸಂದೇಹಗಳಿ ದ್ದರೆ ವಿದ್ಯಾನಂದ ಮುನಿಗಳನ್ನು ಕೇಳಿರಿ'–ಎಂದು ವಿನೋಬಾ ಭಾವೆಯವರು ಅವರಿಗೆ ಹೇಳಿದ್ದರಂತೆ ಆ ಪ್ರಕಾರ ಅವರು ಮ. ಗಾಂಧಿಯ ಮತ್ತು ಜೈನರ ಅಹಿಂಸೆಯಲ್ಲಿ ಅಂತರವೆಲ್ಲಿದೆ ಹಾಗೂ ಏಕತೆ ಯಾವುದು?'–ಎಂದು ಕೇಳಿದ ಪ್ರಶ್ನೆಯ ಮೇಲೆ ಸುಮಾರು ಎರಡೂವರೆ ಗಂಟೆ ಕಾಲ ಚರ್ಚೆಯಾ ಯಿತು. ಎಷ್ಟೋ ಪ್ರಶ್ನೋತ್ತರಗಳಾದವು, ಆಗ ಜೈನ ಧರ್ಮದಲ್ಲಿರುವ ಅಹಿಂಸೆಯ ವ್ಯಾಪಕವಾದ ಸ್ವರೂಪವನ್ನು ಹೇಳುತ್ತಿರುವಾಗ ಈ ಶ್ಲೋಕ ಮತ್ತು 'ಕ್ಷೇಮಂ ಸರ್ವ ಪ್ರಜಾನಾಂ' ಮೊದಲಾದ

ಹಲವಾರು ಶ್ಲೋಕಗಳ ಆಧಾರದಿಂದ ಅವರಿಗೆ ಸ್ಪಷ್ಟ ಪಡಿಸಲು ಅವರು ಏನನ್ನೂ ಮಾತನಾಡಲು ದಾರಿ ಕಾಣದೆ ಮೌನವಾದರು. ಜೈನ ಧರ್ಮದಲ್ಲಿರುವ ವಿಶ್ವಕಲ್ಯಾಣದ ಉದಾತ್ತ ಹಾಗೂ ವಿಶಾಲವಾದ ಮನೋಭೂಮಿಕೆಯು ಇನ್ನೂ ನಮಗೇ ತಿಳಿದಿಲ್ಲವೆಂದಮೇಲೆ ಇತರರಿಗೇನು ತಿಳಿಸಿಕೊಡುವ ಸಾಧ್ಯತೆಯಿದೆ ? ಎಂದರು.

ಗುರುದೇವ :– ಈ ಮಾತು ತುಂಬಾ ಸತ್ಯವಾಗಿದೆ. ಅದಕ್ಕಾಗಿ ಇಂದು ತತ್ತ್ವಾಭ್ಯಾಸ, ಜಿನವಾಣಿಯ ಸೂಕ್ಷ್ಮವಾದ ಅಭ್ಯಾಸ ಚಿಂತನ–ಮನನಗಳು ಅತ್ಯಾವಶ್ಯಕವೆನಿಸಿವೆ. ಎಲ್ಲಿಯವರೆಗೆ ಈ ಕಾರ್ಯ ವಾಗುವದಿಲ್ಲ ಅದುವರೆಗೆ ಜಿನ ಧರ್ಮದ ನಿಜವಾದ ಪ್ರಭಾವನೆಯು ಹೇಗಾಗುವುದು ? ತರುಣ ಸಮೂಹವು ಈ ದೃಷ್ಟಿಯಿಂದ ಸತತ ಪ್ರಯತ್ನ ಮಾಡಬೇಕಾಗಿದೆ.

ಶ್ರೀ ತಾತ್ಯಾ :– ಈಗ ಉಪಸ್ಥಿತವಾಗಿರುವ ಪ್ರಶ್ನೆಯೆಂದರೆ ತೀರ್ಥಕ್ಷೇತ್ರ ಕಮೀಟಿಯು ಅವಲಂಬನೆಯಿಂದ ಯಾವ ತೀರ್ಥ ಸಂರಕ್ಷಣೆಗೆ ಹಾಗೂ ಜೀರ್ಣೋದ್ಧಾರ ಮೊದಲಾದ ವಿಕಾಸ ಕಾರ್ಯಗಳನ್ನು ಯೋಜಿಸಿಕೊಂಡಿದ್ದೀರಿ ಅದಕ್ಕೊಂದು ನಿಶ್ಚಿತ ಸ್ವರೂಪವು ಬರಬೇಕಾಗಿದೆ. ಅದು ಯಾವ ರೀತಿಯಿಂದ ಬಂದೀತು?–ಎಂಬ ಬಗ್ಗೆ ಶ್ರೀ ಸಾಹೂಗಳೊಡನೆ ಮಾತುಕತೆ ನಡೆದಿದೆ,

ಗುರುದೇವರು :– ಮೂಲ ಪ್ರಶ್ನೆಯೆಂದರೆ ಕಾರ್ಯ
ಕರ್ತರ ಅಭಾವ! ಈ ಕೆಲಸಕ್ಕಾಗಿ ತಮ್ಮನ್ನು ದಾನ
ಕೊಡುವ ಕಾರ್ಯಕುಶಲರಾದ ಜನರು ದೊರಕದ
ಹೊರತು ಕೆಲಸಕ್ಕೆ ಗತಿಯಾದರೂ ಹೇಗೆ ಬಂದೀತು?
ದುಡ್ಡಂತೂ ಬೇಕು. ಆದರೆ ಅದರೊಡನೆ ಅತ್ಯಂತ
ಕಳಕಳಿಯ ಕಾರ್ಯಕರ್ತರೂ ಬೇಕು. ಅದಕ್ಕಾಗಿ
ಮೊದಲು ಅವರುಗಳ ಅವಶ್ಯಕತೆಯಿದೆ ತಮ್ಮ ಹತ್ತಿರ
ಎರಡೂ ಇಲ್ಲವೆಂದಮೇಲೆ ಕೆಲಸ ಹೇಗಾದಾವು?

ಶೀಲಾಚಾರ್ಯ :– ನಮ್ಮ ಸಮಾಜದಲ್ಲಿ ದುಡ್ಡು ಕೊಡು
ವವರಂತೂ ಸಾಕಷ್ಟು ಜನರಿದ್ದಾರೆ. ಆದರೆ ಕೆಲಸ
ಮಾಡುವುದಕ್ಕಾಗಿ ಜೀವನ ದಾನ ಕೊಡುವ ಇಲ್ಲವೆ
ಕೆಲಕಾಲದ ವರೆಗಾದರೂ ಸಹಯೋಗವೀಯುವ
ಜನರು ಕಡಿಮೆಯಾಗಿದ್ದಾರೆ. ಮಹಾರಾಜರೇ, ಈಗ
ಸಧ್ಯಕ್ಕಂತೂ ಇದು ತಮ್ಮ ಸಂಸ್ಥೆಯಿಂದಲೇ ಸಾಧ್ಯ
ವಾಗಿದೆ ತಾವು ಇದುವರೆಗೆ ಅಂಥ ಅದೆಷ್ಟೊ ಕಳ
ಕಳಿಯ ಕಾರ್ಯಕರ್ತರನ್ನು ನಿರ್ಮಾಣಮಾಡಿದ್ದೀರಿ.

ಗುರುದೇವ :– ಅಷ್ಟರಿಂದಲೇ ಏನಾಗುವ ಸಾಧ್ಯತೆ
ಯಿದೆ ? ತೀರ್ಥಕ್ಷೇತ್ರ ಸಂರಕ್ಷಣೆಯ ಕೆಲಸವು
ಅತ್ಯಂತ ಹಿರಿಯದೂ, ವಿಶಾಲವೂ ಆಗಿದೆ. ಅದಕ್ಕಾಗಿ
ಹೊಸ ಹುರುಪಿನ ಅದೆಷ್ಟೋ ಕಾರ್ಯಕರ್ತರು
ಬೇಕಾಗಬಹುದು. ಮತ್ತು ಅದರ ಯೋಗಕ್ಷೇಮ
ಕ್ಕಾಗಿ ಸಾಕಷ್ಟು ದುಡ್ಡು ಬೇಕಾಗಿದೆ. ಇಂದಿನ ಪರಿ

ಸ್ಥಿತಿಯಲ್ಲಿ ಎಲ್ಲವನ್ನೂ ತ್ಯಾಗಮಾಡಿ ಬರಲು ಯಾರೂ ಸಿದ್ಧರಿಲ್ಲ. ಅವರ ಸಂಸಾರವು ಸುಸೂತ್ರವಾಗಿ ಸಾಗುವಷ್ಟು ದುಡ್ಡು ಕೊಟ್ಟರೆನೇ ಒಂದು ವೇಳೆ ಬರಬಹುದಾಗಿದೆ. ನಮ್ಮ ಹತ್ತಿರ ಅಷ್ಟು ಔದಾರ್ಯವೆಲ್ಲಿದೆ? ದುಡ್ಡೇ ಇಲ್ಲವೆಂದಮೇಲೆ ಅಂಥ ಔದಾರ್ಯಬರುವುದಾದರೂ ಎಲ್ಲಿದ? ಶ್ವೇತಾಂಬರರ ಹತ್ತಿರ ಅವೆರಡೂ ಸಾಧ್ಯವಿದೆಯೆಂದೇ ಅವರ ಎಲ್ಲ ಕೆಲಸಗಳು ಬೇಗನೇ ಕಾರ್ಯಗತವಾಗುತ್ತವೆ.

ವಿಲಾಚಾರ್ಯ :- ನಾನು ಹಿಮಾಲಯದೊಳಗೆ ವಿಹರಿಸುತ್ತಿರುವಾಗ ಅಲ್ಲಿ ಸೇವಾನಿವೃತ್ತರಾದ ಆಯ್. ಸಿ. ಎಸ್ ಪದವೀಧರರು ಸಂಬಳವಿಲ್ಲದೆಯೇ ತಮ್ಮ ಸಹಕಾರ ನೀಡುತ್ತಿರುವಂಥ ಅದೆಷ್ಟು ಸಂಸ್ಥೆಗಳನ್ನು ನಾನು ನೋಡಿದ್ದೇನೆ ನಮ್ಮ ಕಡೆಗೆ ಮಾತ್ರ ಇಂಥ ಪ್ರವೃತ್ತಿಯೇ ಕಂಡು-ಬರುವದಿಲ್ಲ ಇತ್ತ ಕಡೆಗೆ ಕೆಲಸದಿಂದ ಬಿಡುಗಡೆಯಾಗುವ ಮೊದಲೇ ಮುಂದಿನ ಕಾಲಕ್ಕಾಗಿ ಇನ್ನೊಂದು ಕೆಲಸವನ್ನು ನೋಡಿಟ್ಟುಕೊಂಡಿರುತ್ತಾರೆ.

ಗುರುದೇವ :- ತಾವು ಇಂಥವರಿಗೇ ಪ್ರೇರಣೆಮಾಡಿ, ಈ ಮಹತ್ವಪೂರ್ಣವಾದ ಕಾರ್ಯದ ಹೊಣೆಯನ್ನು ಅವರಿಗೆ ವಹಿಸಿಕೊಡಬೇಕಾಗಿದೆ. ಶ್ರೀ ತಾತ್ಯಾ ಅವರು ಇತ್ತೀಚೆಗೆ ಅಂಥ ಒಬ್ಬಿಬ್ಬರನ್ನು ದೊರಕಿಸಿ ತಂದು ಕೆಲಸಕ್ಕೆ ಹಚ್ಚಿದ್ದಾರೆ. ಆದರೆ ಅಷ್ಟರಿಂದಲೇ ಏನಾ

ದೀತು? ತಾವು ಈ ದೃಷ್ಟಿಯಿಂದ ವಿಚಾರಮಾಡಿ ಪೆಚ್ಚು ಪ್ರಯತ್ನ ಮಾಡಬೇಕೆಂದು ನಮಗನಿಸುತ್ತದೆ.

ಏಲಾಚಾರ್ಯ :– ಇವನ್ನು ಅವಶ್ಯವಾಗಿ ಮಾಡಲಾಗುವುದು. ದಿಲ್ಲಿ, ಮೇರಠ, ಇಂದೂರ ಮೊದಲಾದ ಸ್ಥಳಗಳಲ್ಲಿ ಇಂಥ ಕೆಲಸಕ್ಕಾಗಿ ಯಾವುದೇ ಅಪೇಕ್ಷೆಯನ್ನಿಟ್ಟುಕೊಳ್ಳದೆ ಸಹಕಾರ ನೀಡುವ ಅದೆಷ್ಟೋ ಕಾರ್ಯಕರ್ತರು ಸಿದ್ಧರಾಗಿದ್ದಾರೆ. ವಿಹಾರ ಮಾಡುತ್ತಿರುವಾಗ ಯಾವಾಗಲೂ ನಾನು ಈ ದೃಷ್ಟಿಯಿಂದ ಪ್ರಯತ್ನ ನಡೆಸಿರುತ್ತೇನೆ.

ಗುರುದೇವ :– ಚನ್ನಾಗಿದೆ! ಒಳ್ಳೆಯ ಸಂಗತಿಯಿದು ಶ್ರೀ ಸಾಹುಗಳೂ ಕೂಡ ಈ ವಯಸ್ಸಿನಲ್ಲಿ ಅದೆಷ್ಟು ಉತ್ಸಾಹಿತರಾಗಿದ್ದಾರೆ! ಕೆಲಸದ ಲವಲವಿಕೆ ಎಂಥದು! ಧರ್ಮದ ಸಂಬಂಧದಲ್ಲಿ ವಿಶೇಷವಾಗಿ ತೀರ್ಥಕ್ಷೇತ್ರದ ಸಂಬಂಧದಲ್ಲಿ ಅವರ ಅಂತಃಕರಣದೊಳಗೆ ಅಷ್ಟು ಜಾಜ್ವಲ್ಯಮಾನವಾದ ಪ್ರೇಮ, ನಿಷ್ಠೆಗಳಿಲ್ಲದೆ ಹೊರತು ಇದು ಸಂಭವಿಸುವುದು ಸಾಧ್ಯವೇ?

ಏಲಾಚಾರ್ಯ :– ಶಕ್ಯವಿಲ್ಲ! ಧರ್ಮದ ಬಗ್ಗೆ ಅವರಿಗಿರುವ ಉತ್ಸಾಹವನ್ನು ನೋಡಿದರೆ ಇಂದಿನ ತರುಣರೂ ಕೂಡ ನಾಚಿಕೆ ಪಟ್ಟುಕೊಳ್ಳಬೇಕು. ಅವರಿಗೆ ದಿವಸದ ಇಪ್ಪತ್ನಾಲ್ಕು ಗಂಟೆಯಲ್ಲೂ ಧರ್ಮ

ಹಾಗೂ ಸಂಸ್ಕೃತಿಯ ರಕ್ಷಣೆ ಹೇಗಾದೀತು ಎಂಬುದೊಂದೇ ತಳಮಳ! ಅದೊಂದೆ ಧ್ಯಾನ! ತೀರ್ಥಕ್ಷೇತ್ರಗಳ ವಿಕಾಸವು ಹೇಗಾದೀತು ಪ್ರತಿಯೊಂದು ಪ್ರಾಚೀನ ಕ್ಷೇತ್ರಗಳಲ್ಲಿ ಎಲ್ಲ ಆಧುನಿಕ ಸಲಕರಣೆಗಳಿಂದ ಸುಸಜ್ಜಿತವಾದ ಒಂದೊಂದು ಧರ್ಮಶಾಲೆಗಳಾದರೂ ಆಗಬೇಕೆಂದು ಇದೀಗ ಸನ್ನೊಡನೆ ಮಾತನಾಡುತ್ತಿರುವಾಗ ಅನ್ನುತ್ತಿದ್ದರು.

ಶ್ರೀ ಸಾಹೂ ಶಾಂತಿಪ್ರಸಾದರ ನಂತರ ಸಮಾಜದ ನೇತೃತ್ವವನ್ನು ಸಮರ್ಥರೀತಿಯಿಂದ ಯಾರು ವಹಿಸಿಕೊಂಡಾರೆಂಬ ಚಿಂತೆಯಿತ್ತು. ಆದರೆ ಅವರ ಕಾರ್ಯಕುಶಲತೆಯನ್ನು ನೋಡಿ ಇಂದು ಆ ಚಿಂತೆಯೂ ದೂರವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಗುರುದೇವ :- ಶ್ರೀ ತಾತ್ಯಾ ಅವರೂ ಯಾವಾಗಲೂ ಇದನ್ನೇ ಹೇಳುತ್ತಾರೆ. ಅವರಲ್ಲಿ ಸಂಘಟನ ಚಾತುರ್ಯವು ಬಹಳ ದೊಡ್ಡದಿದೆ. ಅವರು ಶಾಂತಪ್ರಿಯರೂ, ಗಂಭೀರರೂ, ಉದಾರ ವೃತ್ತಿಯವರೂ ಆಗಿದ್ದಾರೆ.

ಏಲಾಚಾರ್ಯ :- ಅಲ್ಲದೆ ಅತ್ಯಂತ ಕೋಮಲ ಅಂತಃಕರಣವುಳ್ಳವರೂ, ಸರಳ ಸ್ವಭಾವದವರೂ, ಆಗಿದ್ದಾರೆ. ವಿರೋಧ ಪರಿಸ್ಥಿತಿಯಲ್ಲಿ ಕೂಡ ತುಂಬಾ

ಗಂಭೀರರೂ ಮತ್ತು ತಮ್ಮ ವಿಚಾರದಲ್ಲಿ ತಾವು ಗಟ್ಟಿಯಾಗಿಯೂ ಇರುತ್ತಾರೆ. ಇಂದೂರದಲ್ಲಿ ನವ ಸುಧಾರಕರು ಅವರೆದುರು ನಿಂತು 'ನೀವು ಇದನ್ನು ಮಾಡಲಿಲ್ಲ, ಅದನ್ನು ಮಾಡಲಿಲ್ಲ'— ಎಂದೆನ್ನುತ್ತ ತಮ್ಮ ರೋಷವನ್ನೆಲ್ಲ ಕಾರಿಕೊಂಡರು. ಕೆಲವರು ಅವಾಚ್ಯ ಶಬ್ದಗಳನ್ನೂ ಆಡಿದರು. ಆದರೂ ಶ್ರೀ ಸಾಹುಗಳು ಸ್ವಲ್ಪವೂ ಸಿಟ್ಟಾಗದೆ ತಾವನ್ನುವುದೆಲ್ಲವೂ ಸರಿಯಾಗಿದೆ, ಇದುವರೆಗೆ ಮಾಡಿದ್ದು ತೀರ ಅತ್ಯಲ್ಪ ಇನ್ನೂ ಮಾಡುವುದು ಬಹಳವಾಗಿದೆ. ನೀವೆಲ್ಲರೂ ನಮ್ಮ ಮಕ್ಕಳಾಗಿರುವುದರಿಂದ ನೀವು ನಮಗಲ್ಲದೆ ಇನ್ನಾರಿಗೆ ಮಾತನಾಡುತ್ತೀರಿ ? ಇನ್ನೂ ಮಾಡದೆ ಉಳಿದಿರುವುದನ್ನು ನೀವು-ನಾವು ಕೂಡಿಯೇ ಮಾಡೋಣ !'—ಅಂದರು ನೋಡಿ, ಅವರಲ್ಲಿ ಎಂಥ ವಿವೇಕ, ಎಷ್ಟು ಸಂಯಮವಿದೆ!

ಗುರುದೇವ :— ಉದಾರ ಮನಸ್ಸಿನ ಮನುಷ್ಯರ ಲಕ್ಷಣವೇ ಇದಾಗಿದೆ ಯಾರಾದರೂ ಅಜ್ಞಾನದಿಂದ ಏನನ್ನೇ ಆಡಿದರೂ ಅತ್ತ ಲಕ್ಷ್ಯಕೊಡದೆ ಒಂದು ಕರ್ತವ್ಯ ದೃಷ್ಟಿಯನ್ನೇ ಮುಂದಿಟ್ಟುಕೊಂಡು ನಡೆಯುವುದೇ ಮಹತ್ವವಿದೆ. ಉದಾರವಾದ ಅಂತಃಕರಣಕ್ಕೆ ಇದೊಂದು ಒಳ್ಳೆಯ ಸಾಕ್ಷಿಯಾಗಿದೆ.

ನಿಲಾಚಾರ್ಯ :— ಶ್ರೀ ಸಾಹುಗಳು ಶ್ರವಣಬೆಳಗೊಳದ ಸಲುವಾಗಿಯೂ ಬಹಳಷ್ಟು ಕೆಲಸ ಮಾಡಿದ್ದಾರೆ

ಅದರಂತೆ ಶ್ರೀ ಸೇಠ ಲಾಲಚಂದರೂ ಮಾಡಿದ್ದಾರೆ. ಪ್ರತಿಯೊಂದು ಕಮಿಟಿಗೆ ಉಪಸ್ಥಿತವಾಗಿದ್ದು ಮಹತ್ವದ ವಿಷಯಂದತ್ತ ಕರ್ನಾಟಕ ಸರಕಾರದ ಲಕ್ಷ ಸೆಳೆದು ಕ್ಷೇತ್ರದ ಪ್ರಗತಿಯ ದೃಷ್ಟಿಯಿಂದ ಸಾಕಷ್ಟು ಕೆಲಸ ಮಾಡಿಸುವಲ್ಲಿ ಇಬ್ಬರೂ ಮಹಾನು ಭಾವರು ಬಹಳಷ್ಟು ಸಹಕಾರ ನೀಡಿದ್ದಾರೆ.

ಗುರುದೇವ :– ಇಂಥ ಪ್ರಮುಖ ವ್ಯಕ್ತಿಗಳು ಮುಂದಾಳಾಗಿ ದುಡಿದರೆಂದೇ ಸಮಾಜದ ಹಾಗೂ ಧರ್ಮದ ಮಹತ್ವಪೂರ್ಣವಾದ ಕಾರ್ಯಗಳು ಇಂದಿನವರೆಗೆ ಆಗುತ್ತ ಬಂದಿವೆ, ಮತ್ತು ಮುಂದೆಯೂ ಆಗಬಹುದು. ಆದರೆ ಈಗ ಅವರು ವಯೋವೃದ್ಧರಾಗಿರುವುದರಿಂದ ಅವರ ಆ ಸ್ಥಾನವನ್ನು ಇನ್ನು ಮುಂದೆ ತರುಣ ಕಾರ್ಯಕರ್ತರು ಸ್ವೀಕರಿಸಬೇಕಾಗಿದೆ. ಅವರ ಅಪೇಕ್ಷೆಯೂ ಇದೇ ಆಗಿದೆ. ಎಷ್ಟೋಸಲ ಅವರು ಇಲ್ಲಿಗೆ ಬಂದಾಗ ಈ ವಿಷಯವನ್ನು ಸ್ಪಷ್ಟ ಪಡಿಸಿದ್ದಾರೆ.

ಏಲಾಚಾರ್ಯ :– ತಮ್ಮ ಹೇಳಿಕೆ ಸತ್ಯವಾಗಿದೆ. ಆದರೆ ಇದು ನೈಸರ್ಗಿಕವಾಗಿ ಆಗುತ್ತಿರುತ್ತದೆ. ಅದುವರೆಗೆ ಇಂಥ ಸರ್ವಮಾನ್ಯರಾದ ಸಮಾಜ ಮುಂದಾಳುಗಳ ಧರ್ಮೋತ್ಸಾಹವು ಅಖಂಡವಾಗಿರುತ್ತದೆ. ಮತ್ತು ಅವರ ಶರೀರ ಸ್ವಾಸ್ಥ್ಯವಿರುವವರೆಗೆ

ಸಮಾಜವು ಅವರ ನೇತೃತ್ವದ ಅಪೇಕ್ಷೆಯನ್ನು ಮಾಡದೇ ಮಾಡುತ್ತದೆ.

ಗುರುದೇವ :– ಆದರೂ ಅದಕ್ಕೊಂದು ನೈಸರ್ಗಿಕವಾದ ಮರ್ಯಾದೆಯು ಇದ್ದೇ ಇರುತ್ತದೆ. ಭಾವನೆ ಇರುವಷ್ಟು ಶರೀರ ಶಕ್ತಿಯು ಕೆಲಸಕೊಡುವದಿಲ್ಲ. ಅದಕ್ಕಾಗಿಯೇ ಅವರೆದುರಿನಲ್ಲಿ ಹೊಸ ನೇತೃತ್ವವು ಮುಂದೆ ಬರುವುದು ಅವಶ್ಯಕವೆನಿಸಿದೆ. ಆನಿಮಿತ್ತದಿಂದ ಅವರ ಅನುಭವದ ಲಾಭ ಮತ್ತು ಯೋಗ್ಯ ಮಾರ್ಗದರ್ಶನವು ಮುಂದಿನವರಿಗೆ ಸಿಕ್ಕುವ ಸಾಧ್ಯತೆಯಿದೆ.

ಇಲ್ಲಿ ಕೂಡ ಈ ಜನರು (ಶ್ರೀ ತಾತ್ಯಾ ಹಾಗೂ ಶ್ರೀ ಭೀಸೀಕರ ಅವರನ್ನು ಉದ್ದೇಶಿಸಿ) ಇದನ್ನೇ ಮೇಲಿಂದ ಮೇಲೆ ಹೇಳುತ್ತಿರುತ್ತಾರೆ, ಕೆಲಸವು ಒಂದಿಷ್ಟು ಕಡಿಮೆಯಾದರೂ ಅಡ್ಡಿಯಿಲ್ಲ ಆದರೆ ಕರ್ತವ್ಯ ತತ್ಪರರಾದ ಮನುಷ್ಯರನ್ನು ನಿರ್ಮಾಣ ಮಾಡಿರಿ. ಅಂಥ ವಿದ್ಯಾರ್ಥಿಗಳನ್ನಾಯ್ದುಕೊಂಡು ಅವರನ್ನು ಯಾವಾಗಲೂ ನಿಮ್ಮ ಹತ್ತಿರ ಇಟ್ಟುಕೊಳ್ಳಿರಿ. ಒಳ್ಳೆಯ ವ್ಯಕ್ತಿಯ ಸಹವಾಸದಿಂದಲೇ ಅವರಲ್ಲಿ ಸಮಾಜಸೇವೆ ಮಾಡುವ ಭಾವನೆಯು ಮತ್ತು ಪಾತ್ರತೆಯು ನಿರ್ಮಾಣವಾಗಬಹುದು. ಹೀಗೆ ಮಾಡದೆ ಕೇವಲ ಮೇಲೋಪಚಾರದ ಪ್ರಯತ್ನಗಳಿಂದ ಯಾವ ಪ್ರಯೋಜನವಾಗದು.

ಬಾಲಾಚಾರ್ಯ :- ತಮ್ಮ ಹೇಳಿಕೆ ತುಂಬಾ ಸತ್ಯವಾಗಿದೆ! ಮಹಾತ್ಮಾ ಗಾಂಧೀಜಿಯವರು ತಮ್ಮ 'ವಿಚಾರ-ದೋಹನ' ವೆಂಬ ಪುಸ್ತಕದಲ್ಲಿ "ಸಂಸ್ಥೆಯೆಂದರೆ ಕಟ್ಟಡಗಳಾಗಲಿ ಅಥವಾ ಹಣದ ದೊಡ್ಡ ಮೊತ್ತಾಗಲಿ ಅಲ್ಲ; ಅದರಲ್ಲಿರುವ ನಿಸ್ವಾರ್ಥರಾದ ಕಾರ್ಯಕರ್ತರೆಂದರೆನೇ ನಿಜವಾದ ಸಂಸ್ಥೆಯು. ಅಂಥವರ ಸಾಮರ್ಥ್ಯದ ಮೇಲೆಯೇ ಅವು ಬದುಕಿರುತ್ತವೆ ಮತ್ತು ಬೆಳೆಯುತ್ತಿರುತ್ತವೆ"— ಎಂದು ಹೇಳಿದ್ದಾರ.

ಗುರುದೇವ :-- ಇದು ತೀರಾ ಸತ್ಯವಾಗಿದೆ! ಯಾರು ಮಹಾತ್ಮಾಜಿಯವರ ಸಹವಾಸದಲ್ಲಿದ್ದರೋ ಅವರೇ ಮುಂದೆ ಎಲ್ಲರ ಮನ್ನಣೆಗೂ ಪಾತ್ರರಾಗುವಂಥ ದೊಡ್ಡ ಮುಂದಾಳುಗಳಾದರು. ಆದರೆ ಆ ಪರಂಪರೆಯು ಮುಂದೆ ಉಳಿಯಲಿಲ್ಲ. ಹಾಗೆ ಮಹಾರಾಜರ ಸಹವಾಸದಲ್ಲಿ ಯಾರು ಹೆಚ್ಚು ಕಾಲ ಉಳಿದಿದ್ದಾರೆ ಅವರಷ್ಟೇ ಕೆಲಸ ಮಾಡುತ್ತಿದ್ದಾರೆ. ಇನ್ನು ಮುಂದೆ ಆ ಪರಂಪರೆಯನ್ನು ಕಾಯ್ದುಕೊಂಡು ಹೋಗುವ ಕರ್ತವ್ಯ ಅವರದಿದೆ. ಇತರ ಕೆಲಸಗಳು ಬೆಳೆದು ಬಿಟ್ಟಿವೆಯೆಂದು ಈ ಮುಖ್ಯ ಕೆಲಸವನ್ನೇ ಗೌಣ ಮಾಡಿ ಬಿಟ್ಟರೆ ನಡೆಯುವಂತಿಲ್ಲ. ಪ್ರಯತ್ನ ಪಣಕ್ಕಿಟ್ಟಾದರೂ ಆಗಲಿ ಹೊಸ ಪಾತ್ರವನ್ನು ನಿರ್ಮಾಣ ಮಾಡಲೇಬೇಕು. ಅವರಿಗೆ ಇಂಥವರ ಸಹವಾಸವು

ನಿರಂತರವಾಗಿ ದೊರಕಬೇಕು. ಇದು ಹೊರಗಿನ ಕೆಲಸಗಳಿಗಿಂತ ಹೆಚ್ಚು ಮಹತ್ವದ್ದಾಗಿದೆ.

ವಿಲಾಚಾರ್ಯ :- ಸರಿಯಾಗಿದೆ. ಈ ಮಾತು ಎಷ್ಟು ಮಹತ್ವದ್ದಿದೆ! ಸಮಾಜದ್ದೇ ಇರಲಿ ಅಥವಾ ರಾಷ್ಟ್ರದ್ದೇ ಇರಲಿ ಎಲ್ಲ ಕ್ಷೇತ್ರಗಳಲ್ಲೂ ಈ ತತ್ತ್ವವು ಅನ್ವಯಿಸುತ್ತದೆ.

ಗುರುದೇವ :- ಈ ಭಾಗದ ಹಳ್ಳಿಗಾಡಿನ ಬಹಳಷ್ಟು ಸಮಾಜವು ಬಡತನ ಹಾಗೂ ಅಜ್ಞಾನಗಳಿಂದ ತುಂಬಿದೆ ತಮ್ಮ ಧರ್ಮದ್ದಾಗಲಿ ಇಲ್ಲವೆ ಕರ್ತವ್ಯದ್ದಾಗಲಿ ಸಮೀಚೀನವಾದ ಜ್ಞಾನವು ಅವರಿಗೆ ಅಷ್ಟೊಂದಿಲ್ಲ. ಆದಾಗ್ಯೂ ಧರ್ಮದ ಶ್ರದ್ಧೆಯು ಮಾತ್ರ ಅಂತರಂಗದಲ್ಲಿ ಆಳವಾಗಿ ನೆಲೆಸಿದೆ. ಅದರಿಂದಲೇ ಅವರು ತಾವು ಬೆವರು ಸುರಿಸಿ ಗಳಿಸಿದ ಹಣವನ್ನು ಮುಕ್ತ ಹಸ್ತದಿಂದ ಈ ಸಂಸ್ಥೆಗೆ ಕೊಟ್ಟಿದ್ದಾರೆ. ಹೊಲಗಳಲ್ಲಿ ಬೆಳೆಯುವ ಕಾಳು ಕಡಿಗಳನ್ನು ಪ್ರತಿ ವರುಷವೂ ತಪ್ಪದೆ ಭಕ್ತಿಯಿಂದ ಕೊಡುತ್ತ ಬಂದಿದ್ದಾರೆ. ಇಂಥ ದಾನವು ಉಳಿದಕಡೆಗಳಲ್ಲಿ ದೊರಕುವದು ಕಠಿಣವಿದೆ. ಶ್ರೀಮಂತನು ಒಂದು ಸಾವಿರ ರೂಪಾಯಿ ಕೊಟ್ಟರೂ ಬಡವನಾದವನು ಒಂದು ನೂರೇ ರೂಪಾಯಿಗಳನ್ನು ಕೊಡುವುದರಲ್ಲಿ ಹೆಚ್ಚಿನ ಮಹತ್ವವಿದೆ. ಯಾಕೆಂದರೆ ಅದಕ್ಕೆ ಹಿನ್ನೆಲೆಯಾಗಿ ಅವನ ಹಿರಿದಾದ ಅಂತಃಕರಣವಿರುತ್ತದೆ, ಭಕ್ತಿ-ಭಾವವೂ ಮೇಲ್ತರಗತಿಯದಾಗಿರುತ್ತದೆ.

ಏಲಾಚಾರ್ಯ – ಓಹೋ! ಎಷ್ಟು ಉದಾತ್ತ ವಿಚಾರ ವಿದು! ಮಹಾರಾಜರೇ, ನನಗೊಂದು ಪ್ರಸಂಗದ ಸ್ಮರಣೆಯಾಗುತ್ತಿದೆ ಪ ಪೂ. ಆಚಾರ್ಯಶ್ರೀ ಶಾಂತಿ ಸಾಗರ ಕಡೆಗೆ ಒಮ್ಮೆ ಒಬ್ಬ ದೊಡ್ಡ ಸಟ್ಟಾವ್ಯಾಪಾರಿಯು ಬಂದು 'ನನಗೆ ಪಂಚಕಲ್ಯಾಣ ಮಹೋತ್ಸವ ಮಾಡುವ ಮನಸ್ಸಿದೆ. ಎಂದನು, ಮಹಾರಾಜರಿಗೆ ಆತನ ಪರಿಚಯುವಿದ್ದಿರಬೇಕು. ಅದಕ್ಕಾಗಿಯೇ ಅವರು ನಗುತ್ತ 'ಮಹನೀಯರೇ ಮೊದಲು ಸಟ್ಟಾ ವ್ಯಾಪಾರವನ್ನು ನಿಲ್ಲಿಸಿರಿ, ಅನಂತರ ಪಂಚ ಕಲ್ಯಾಣದ ವಿಚಾರ ಮಾಡೋಣ! ಸಟ್ಟಾ ಆಡಿದರೆ ಎಲ್ಲಾದರೂ ಭಗವಂತನ ಭಕ್ತಿ ಆಗುವದಿರುತ್ತದೆಯೇ? ಅದಕ್ಕಾಗಿ ಮನಸ್ಸು ನಿರ್ಮಲವಾಗಿರಬೇಕಾಗುತ್ತದೆ' ಅದನ್ನು ಕೇಳಿ ಆತ ನಾಚಿಕೆಪಟ್ಟು, ಮುಂದೆ ಸಟ್ಟಾ ಆಡುವದನ್ನೇ ಬಿಟ್ಟುಕೊಟ್ಟನು.

ಗುರುದೇವ :– ಉತ್ತಮ! ಇದಕ್ಕೆನ್ನುತ್ತಾರೆ ನಿಜವಾದ ಮಾರ್ಗದರ್ಶನ! ಆಚಾರ್ಯಶ್ರೀಯವರು ಇಂಥ ಅದೆಷ್ಟೋ ಜನರಿಗೆ ನಿಜವಾದ ಜೀವನ ದೃಷ್ಟಿಯನ್ನೊದಗಿಸಿದ್ದಾರೆ.

ಏಲಾಚಾರ್ಯ :– ಇನ್ನೊಂದು ಇದು ರವೀಂದ್ರನಾಥ ಟ್ಯಾಗೋರ ಅವರ ಜೀವನದಲ್ಲಿಯ ಒಂದು ಉಲ್ಲೇಖ

ನೀಯವಾದ ಘಟನೆಯಿದೆ. ಅವರು 'ಶಾಂತಿನಿಕೇತನ'
ದ ಸಹಾಯಕ್ಕಾಗಿ ಹೆಣ್ಣುಮಕ್ಕಳಿಂದ ನೃತ್ಯ ಮಾಡಿಸಿ
ದುಡ್ಡು ಸಂಗ್ರಹಿಸುತ್ತಿದ್ದರು. ಇದರಿಂದ ಅಸಂತೋಷ
ಗೊಂಡ ಕೆಲವು ಸದ್ಗೃಹಸ್ಥರು ಗಾಂಧೀಜಿಯ ಹತ್ತಿರ
ಹೋಗಿ ಈ ವಿಷಯವನ್ನು ತಿಳಿಸಿದರು. ಆಗ
ಗಾಂಧೀಜಿಯವರು ಟ್ಯಾಗೋರರನ್ನು ಕರೆಸಿ 'ನಿಮ
ಗೆಷ್ಟು ದುಡ್ಡು ಬೇಕಾಗಿದೆ?' ಎಂದು ಕೇಳಿದರು.
ಆಗ ಟ್ಯಾಗೋರರು ಅದೆಷ್ಟೋ ಹೇಳಿದರು. ಅದನ್ನು
ಕೇಳಿದ ಗಾಂಧಿಜಿಯವರು 'ಅಷ್ಟು ಹಣ ಕೊಡಿಸಿದರೆ
ಇನ್ನು ಮುಂದೆ ತಾವು ಹೆಣ್ಣುಮಕ್ಕಳಿಂದ ನೃತ್ಯ
ಮಾಡಿಸಿ ದುಡ್ಡು ಸಂಗ್ರಹಿಸುವದನ್ನು ಬಿಟ್ಟುಕೊಡು
ತ್ತೀರಲ್ಲವೇ?' ಎಂದಾಗ ಅದಕ್ಕೆ ಟ್ಯಾಗೋರರು ಒಪ್ಪಿ
ಕೊಳ್ಳಲು ಅವರು ಬಿರ್ಲಾಗೆ ಹೇಳಿ ಹಣದ ವ್ಯವಸ್ಥೆ
ಮಾಡಿಸಿದರು. ಅಂದಿನಿಂದ ಟ್ಯಾಗೋರರು ಆ ಉಪ
ಕ್ರಮವನ್ನು ನಿಲ್ಲಿಸಿದರು. 'ಮೋರತ'ದಲ್ಲಾದ ಸಂಗತಿ
ಯಿದು. ಅಲ್ಲಿಯ ಜನರು ಇದನ್ನು ಹೇಳುತ್ತಿದ್ದರು.

ಗುರುದೇವ :- ಸದ್ಧರ್ಮದ ಪ್ರಚಾರ ಮತ್ತು ತತ್ತ್ವ
ಜ್ಞಾನದ ಪರಿಚಯವು ಸಾಮಾನ್ಯಜನರಲ್ಲಿ ಎಷ್ಟು
ಹೆಚ್ಚಾಗುತ್ತದೆಯೋ ಅಷ್ಟೇ ಅವರ ಜೀವನವು
ಸುಧಾರಣೆಯಾಗುವದು, ನಿಜವಾದ ಕಲ್ಯಾಣವಾಗು
ವದು. ಎಲ್ಲಿಯವರೆಗೆ ಅದರ ಪರಿಚಯವಾಗುವದಿ
ಲ್ಲವೋ ಅದುವರೆಗೆ ಸದಾಚಾರದ ಕಡೆಗೆ ಜನರ
ಪ್ರವೃತ್ತಿಯಾದರೂ ಹೇಗಾದೀತು? ಅದಕ್ಕಾಗಿಯೇ

ಅಲ್ಲಲ್ಲಿ ಸ್ವಾಧ್ಯಾಯಮಂಡಳ ಪಾಠಶಾಲೆಗಳು
ಆರಂಭವಾಗಬೇಕು, ಧರ್ಮಶಿಕ್ಷಣ ಶಿಬಿರಗಳು ನಡೆ
ಯಬೇಕು. ಅದರ ಮುಖಾಂತರ ಣಮೋಕಾರ
ಮಂತ್ರದ ಮಹತ್ವವನ್ನು ಜನರಿಗೆ ತಿಳಿಸಬೇಕು.
ಪ್ರತಿಯೊಂದು ಮನೆಯಲ್ಲೂ ಅದರ ಪಠಣವು ನಿತ್ಯ
ನಡೆಯಬೇಕೆಂದು ಮಹಾರಾಜರಿಗೆ ಅನ್ನಿಸುತ್ತದೆ.
'ಜಿನಧರ್ಮವು ದಕ್ಷಿಣದಲ್ಲಿಯೇ ಉಳಿಯುತ್ತದೆಂದು
ಆಚಾರ್ಯರ ವಾಣಿಯಿದೆ; ಆದರೆ ಅದರ ಸಲುವಾಗಿ
ಶ್ರದ್ಧೆವಹಿಸಿ ಶ್ರಮಿಸಬೇಕಾಗಿಲ್ಲವೆ? ಅದನ್ನು ಯಾರು
ಮಾಡುವವರು.

ಏಲಾಚಾರ್ಯ :- ತಾವು ಹೇಳಿದಂತೆ ಇದು ತ್ಯಾ
ಜನರ ಕರ್ತವ್ಯವೇ ಆಗಿದೆ, ಆದರೆ ಯಾರೂ ಇದನ್
ಅಷ್ಟೊಂದು ಲಕ್ಷಕ್ಕೆ ತಂದುಕೊಳ್ಳದಿರುವುದು ತುಂಬ
ದುಃಖದ ಸಂಗತಿಯೇ ಆಗಿದೆ.

ಗುರುದೇವ :- ಶ್ವೇತಾಂಬರರಲ್ಲಿ ಇಂಥ ಕೆಲಸಕ್ಕಾ
ಜನರನ್ನು ತಯಾರಿಸಿ, ಅವರನ್ನು ಹಲವಾರು ಕ
ಕಳುಹಿಸಲಾಗುತ್ತದೆ, ನಮ್ಮಲ್ಲಿಯಂತೂ ಆ ಪ್ರ
ಕ್ತಿಯೇ ಇಲ್ಲ. ಎಂದ ಮೇಲೆ ಈ ಅಜ್ಞಾನವು ಹೇ
ದೂರಾಗುವುದು?

ಏಲಾಚಾರ್ಯ :- ಮ.ಗೌತಮ ಬುದ್ಧನು ತನ್ನ ಶಿ
ರನ್ನು ದೂರದೇಶಗಳಿಗೆ ಕಳುಹಿಸಿಕೊಡುವುದ

ಯಾವಾಗಲೂ ಉತ್ಸುಕನಿರುತ್ತಿದ್ದನು. ಅಂಥ ಶಿಷ್ಯರನ್ನು ಅವನು ಸಿದ್ಧಪಡಿಸಿದ್ದನು. ಆಗ ಶಿಷ್ಯರು ಅತ್ಯಂತ ಉತ್ಸುಕತೆಯಿಂದ 'ನಾನು ಹೋಗುತ್ತೇನೆ, ನಾನು ಹೋಗುತ್ತೇನೆ' ಎಂದೆನ್ನುತ್ತಿದ್ದರು. ಅದಕ್ಕೆ ಗೌತಮನು 'ನೀವು ಎಲ್ಲಿ ಹೋಗುತ್ತೀರೋ ಅಲ್ಲಿ ಯಾರಾದರೂ ನಿಮಗೆ ಬೈದರೆ, ಅಪಶಬ್ದ ಆಡಿದರೆ, ನಿಮ್ಮ ನಿಂದೆಯನ್ನೇ ಮಾಡಿದರೆ ಆಗ ನೀವೇನು ಮಾಡುವಿರಿ ?'

ಅದಕ್ಕೆ ಶಿಷ್ಯ ಹೇಳುತ್ತಾನೆ–'ಬೈಗಳ ಮಳೆ ಸುರಿಸಿದರೆ ಅದನ್ನು ಆನಂದದಿಂದ ಸಹಿಸುತ್ತೇವೆ. ನಮಗೆ ಪಾಪ ಇವರು ಹೊಡೆದಿಲ್ಲ ತಾನೆ ಅಲ್ಲವ ? ಎಂದು ತಿಳಿದುಕೊಳ್ಳುತ್ತೇವೆ'.

'ಹೀಗೆ ತಿಳಿಯಿರಿ, ಒಂದು ವೇಳೆ ನಿಮ್ಮನ್ನು ಯಾರಾದರೂ ಹೊಡೆದರೆ, ಆಗೇನು ಮಾಡುತ್ತೀರಿ?'

ಗಾಯವಂತೂ ಆಗಿಲ್ಲವಲ್ಲ! ಎಂದೆನ್ನುತ್ತೇವೆ'

'ಒಂದು ವೇಳೆ ಗಾಯವೇ ಆದರೆ ಆಗೇನು ಮಾಡುತ್ತೀರಿ?'

'ಗಾಯವಾದರೇನಂತೆ ಎಲುಬುಗಳಂತೂ ಮುರಿದಿಲ್ಲವಲ್ಲ! ಎಂದೆನ್ನುತ್ತೇವೆ.'

'ಒಂದು ವೇಳೆ ಎಲುಬುಗಳೂ ಮುರಿದು ಹೋದರೆ ಆಗೇನು ಮಾಡುವಿರಿ?'

'ಜೀವವಂತೂ ಹೋಗಿಲ್ಲವಲ್ಲ! ಎಂದೆನ್ನುತ್ತೇವೆ.'

'ಹೋಗಲಿ ಒಂದು ವೇಳೆ ಜೀವವೂ ಹೋಗಿ ಬಿಟ್ಟರೆ ಆಗೇನು ಮಾಡುತ್ತೀರಿ?'

ಆತ್ಮನಂತೂ ಅಮರನಿದ್ದಾನಲ್ಲ! ಎಂದೆನ್ನುತ್ತೇವೆ.'

ಅದಕ್ಕೆ ಬುದ್ಧನು ತನ್ನ ಸಂತೋಷವನ್ನು ವ್ಯಕ್ತ ಪಡಿಸುತ್ತ, 'ಹೀಗಿದ್ದರೆ ನೀವು ಈ ಭೂಮಂಡಲ ದಲ್ಲಿ ಎಲ್ಲಿಯೂ ಹೋಗಬಹುದಾಗಿದೆ. ನಿಮ್ಮ ಇಚ್ಛೆಯಿದ್ದೆಡೆಗೆ ಹೋಗಿರಿ, ಬಂದದ್ದನ್ನು ಪ್ರೇಮ ದಿಂದ ಸ್ವೀಕರಿಸಿ ಮತ್ತು ಧರ್ಮದ ಪ್ರಚಾರ ಮಾಡಿರಿ.- ಎಂದೆನ್ನುತ್ತಿದ್ದನು.

ಇಂಥ ನೂರಾರು ಶಿಷ್ಯರು ಅವನಲ್ಲಿದ್ದರೆಂದೇ ದೂರ ದೂರದ ದೇಶಗಳಲ್ಲಿ ಆ ಧರ್ಮದ ಪ್ರಚಾರವೂ ಪ್ರಸಾರವೂ ಆಗುವುದಕ್ಕೆ ಸಾಧ್ಯವಾಯಿತು.

ಗುರುದೇವ :- ಇದು ಪೂರ್ಣ ಸತ್ಯವಿದೆ! ಯಾವುದೇ ಒಂದು ಒಳ್ಳೆಯ ಮಾತಿನ ಸಲುವಾಗಿ ಇಂಥದೇ ಪಂಥ ಮತ್ತು ಗಟ್ಟಿತನಬೇಕಾಗುತ್ತದೆ. ಜೀವನದಲ್ಲಿ ಯಶಸ್ಸು ಧೈರ್ಯದ ಮೇಲೆಯೇ ಅವಲಂಬಿಸಿರು ತ್ತದೆ. ಕೇವಲ ಇಚ್ಛೆಯ ಮೇಲಿಂದ ಕಾರ್ಯವಾಗುವ ದಿಲ್ಲ. ದಕ್ಷಿಣದಲ್ಲಿರುವಷ್ಟು ಅಜ್ಞಾನವು ಉತ್ತರ ಭಾರತದಲ್ಲಿಲ್ಲ. ಅದಕ್ಕಾಗಿಯೇ ಈ ಭಾಗದಲ್ಲಿ ಜೈನ ಧರ್ಮದ ಪ್ರಚಾರಕ್ಕಾಗಿ ಇಂಥ ಪ್ರಬಲ ಧ್ಯೇಯ

ವಾದಿಗಳಾದ ಮನುಷ್ಯರನ್ನು ಸಿದ್ಧಮಾಡಬೇಕಾಗಿದೆ ಯೆಂದು ಯಾವಾಗಲೂ ಮಹಾರಾಜರಿಗನಿಸುತ್ತಿದೆ. ಅದೇ ನಿಜವಾದ ಕಾರ್ಯವಿದೆ.

ಏಲಾಚಾರ್ಯ :- ಮಹಾರಾಜರೇ, ನಾನೀಗ ವೈಯುಕ್ತಿಕ ಜೀವನದ ವಿಷಯವಾಗಿ ಹೇಳುತ್ತೇನೆ, ನಾನು ಚಿಕ್ಕಂದಿನಿಂದಲೂ ಯಾವ ಮಿಥ್ಯಾ ದೇವರ ಕಡೆಗೆ ಹೋಗಿಲ್ಲ ಮತ್ತು ಕೈಮುಗಿದಿಲ್ಲ. ಊರಲ್ಲಿ ಅನ್ಯ ಧರ್ಮದವರ ಭಜನೆ, ಕೀರ್ತನಗಳಿದ್ದರೆ ಅವನ್ನು ಕೇಳ ಲಿಕ್ಕೆ ಹೋಗುತ್ತಿರಲಿಲ್ಲ. ಸ್ನೇಹಿತರು ಆಗ್ರಹಪಡಿಸ ಬಹುದೆಂದು ತಿಳಿದು ನಾನಿರುವ ಕೋಣೆಗೆ ಹೊರಗಿನಿಂದ ಬೀಗ ಹಾಕಿಸಿ ಒಳಗೆ ಓದುತ್ತ ಕೂಡ್ರುತ್ತಿದ್ದೆ. ನನ್ನ ಮೇಲೆ ತಂದೆಯವರ ಸಂಸ್ಕಾರವೇ ಆ ರೀತಿಯ ದಾಗಿತ್ತು ಅವರು ಬನಾರಸದ ಸ್ಯಾದ್ವಾದ ವಿದ್ಯಾಲಯದ ಮೊದಲನೆಯ ವಿದ್ಯಾರ್ಥಿಗಳು, ಗಣೇಶಪ್ರಸಾದ ವರ್ಣಿಗಳ ಸಹವಾಸದಲ್ಲಿದ್ದವರು.

ಗುರುದೇವ :- ಉತ್ತಮ ! ಅದೇ ಧರ್ಮಸಂಸ್ಕಾರವು ನಿಮ್ಮಮೇಲಾಗಿದೆ. ಜೀವನವು ಹೀಗೇ ನಿರ್ಮಾಣವಾಗುವದಿರುತ್ತದೆ. ದೇವ, ಗುರು, ಧರ್ಮ ಇವುಗಳ ಬಗ್ಗೆ ಯಥಾರ್ಥವಾದ ಜ್ಞಾನವಾಗುವುದೇ ಜೀವನದಲ್ಲಿ ಮಹತ್ವದ್ದಾಗಿದೆ. ನಿಜವಾದ ಸುಖ-ಶಾಂತಿಗಳ ಮೂಲವು ಅದರೊಳಗೇ ಅಡಗಿದೆ. ಆಚಾರ್ಯರು ಪ್ರಶ್ನೋತ್ತರಗಳ ಸ್ವರೂಪದಲ್ಲಿ ಇದರ ವಿಷಯವಾಗಿ ಹೀಗೆ ಹೇಳುತ್ತಾರೆ-

ಕೋ ದೇವೋ ವೀತತಮಾಃ, ಕಃಸಃಗುರುಃ
ಶುದ್ಧಮಾರ್ಗಸಂಭಾಷಿ ।
ಕಿಂ ಪರಮು ವಿಜ್ಞಾನಂ, ಸ್ವಕೀಯು ಗುಣದೋಷ
ವಿಜ್ಞಾನಮ್ ॥

ನಿಜವಾದ ದೇವರಾರು? — ಯಾರು ವಿಕಾರ ರಹಿತರೂ, ನಿರ್ದೋಷರೂ ಅಂದರೆ ವೀತರಾಗರಿದ್ದಾರೆ ಅವರು.

ನಿಜವಾದ ಗುರು ಯಾರು?–ಯಾರು, ಶುದ್ಧವೂ, ನಿರ್ದೋಷವೂ ಆದ ಆತ್ಮಕಲ್ಯಾಣದ ಮಾರ್ಗವನ್ನು ತೋರಿಸುತ್ತಾರೆ ಅವರು.

ಉತ್ಕೃಷ್ಟ ವಿಜ್ಞಾನ ಯಾವುದು?– ಸ್ವತಃ ತಮ್ಮಲ್ಲಿರುವ ಗುಣದೋಷಗಳ ಯಥಾರ್ಥ ಪರಿಚಯವು.

ವಿಲಾಚಾರ್ಯ :– ಆಹಾ! ಇವು ಎಷ್ಟು ಅರ್ಥಪೂರ್ಣವಾದ ಲಕ್ಷಣಗಳಾಗಿವೆ? ತಮ್ಮ ಗುಣದೋಷಗಳ ಜ್ಞಾನವೇ ಪರಮ ವಿಜ್ಞಾನ, ಶುದ್ಧ ಮಾರ್ಗವನ್ನು ಹೇಳುವವರೇ ಸದ್ಗುರುಗಳು, ಆಚಾರ್ಯರು ತೀರ ಅಲ್ಪ ಶಬ್ದಗಳಲ್ಲಿ ಅತ್ಯಂತ ಮಾರ್ಮಿಕವಾದ ಕಥನ ಮಾಡಿದ್ದಾರೆ! ಆತ್ಮ ಶುದ್ಧಿಗಾಗಿ ಸರಳವೂ ಸುಲಭವೂ ನಿರ್ದೋಷವೂ ಆದ ಈ ಉಪಾಯುವನ್ನುಳಿದು ಬೇರೆ ಇನ್ನಾವುದಿರಲು ಸಾಧ್ಯವಿದೆ ?

ಗುರುದೇವ :– ಪೂರ್ಣ ಜಿನಧರ್ಮದ ತಿರುಳೇ ಇದರಲ್ಲಿ ತುಂಬಿದೆಯೆಂದು ಹೇಳಿದರೆ ಯಾವ ಅತಿಶಯೋಕ್ತಿಯಾಗಲಿಕ್ಕಿಲ್ಲ !

ಏಲಾಚಾರ್ಯರು :- ತುಂಬಾ ಸತ್ಯವಾಗಿದೆ! ಜಿನಧರ್ಮವನ್ನುಳಿದು ಬೇರೆ ಇನ್ನಾವುದಿದೆ? ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹವೆಂಬೈದು ತತ್ತ್ವಗಳೆಂದರೆ ಇದರದೇ ವಿಸ್ತಾರವಿದೆ. ಇಡೀ ವಿಶ್ವದ ಕಲ್ಯಾಣಕ್ಕೆ ಈ ಐದು ತತ್ತ್ವಗಳೇ ಕಾರಣವಾಗಿವೆ. ಇವುಗಳಲ್ಲೂ ಎಲ್ಲಕಿಂತ ಮುಖ್ಯವೂ ಸರ್ವವ್ಯಾಪಿಯೂ ಆದ ಅಹಿಂಸಾ ತತ್ತ್ವವು. ಇದೇ ನಿಜವಾದ 'ವಿಶ್ವಧರ್ಮ' ವಾಗಿದೆ. ಜಿನಧರ್ಮಕ್ಕಂತೂ ಇದು ಪ್ರಾಣಸ್ವರೂಪವೇ ಆಗಿದೆ.

ಗುರುದೇವ :- ಆ ಕಾರಣದಿಂದಲೇ 'ಜಿನಧರ್ಮ'ವನ್ನು ಜಗತ್ತಿನ ಜೀವಕೋಟಿಯ 'ರಕ್ಷಕ' ವೆಂದು ಕರೆಯಲಾಗುತ್ತಿದೆ. 'ರಕ್ಷಕ ಏಕಸದೀವ' ವೆಂಬ ವಿಶ್ವ ಕಲ್ಯಾಣಕಾರಕವಾದ ಜಿನಧರ್ಮದ ಪರಂಪರೆಯನ್ನು ಉಳಿಸಿಕೊಂಡು ಬರುವುದು ಸಮಾಜದ ತ್ಯಾಗಿಗಳ ಹಾಗೂ ತರುಣರ ಕರ್ತವ್ಯವಾಗಿದೆ. ನಿಷ್ಠೆಯಿಂದ ಇವರ ಸೇವೆ ಮಾಡುವಲ್ಲಿ ಎಲ್ಲರ ಸೇವೆ ಮಾಡಿದುದರ ಶ್ರೇಯವಿದೆ. ಈ ಕಾರ್ಯವು ಅತ್ಯಂತ ಬೆಲೆಯುಳ್ಳದ್ದೂ, ವಿಸ್ತಾರವೂ ಆಗಿದೆ. ಯಾರು ಎಷ್ಟು ಮಾಡಿದರೂ ಕಡಿಮೆಯೇ ಇದ್ದು, ಮಾಡುವುದು ಇನ್ನೂ ಬಹಳಷ್ಟಿದೆ. ಅದರಲ್ಲಿ ಅಪರಾಧವನ್ನಾಗಲಿ ಉಪೇಕ್ಷೆಯನ್ನಾಗಲಿ ಮಾಡಿದರೆ ನಡೆಯುವಂತಿಲ್ಲ.

ಏಲಾಚಾರ್ಯರು :- ತಮ್ಮ ವಿಚಾರವು ಅತ್ಯಂತ ಉಪಯುಕ್ತವಾಗಿದೆ. ವೈದಿಕ ಸಂಪ್ರದಾಯದಲ್ಲಿ

'ರಶ್ಮಿನಾರಾ' ಎಂಬುದೊಂದು ಗ್ರಂಥವಿದೆ. ಅದರಲ್ಲಿ
ಹೀಗೆ ಬರೆದಿದ್ದಾರೆ– ' ಹಿತಕರವಾದ ಮಾತ್ರವೇ
ಒಳ್ಳೆಯ ಸಂಗತಿಯ ಬಗ್ಗೆ ಅಲ್ಲ, ಸಂತೋಷಿ
ಯಾದವನಿಗೆ ಪ್ರಮಾದಿಯೆನ್ನುತ್ತಾರೆ, ಅವ
ನನ್ನು ಪಾಪಿಯೆಂದು ತಿಳಿಯಬೇಕು; ಇದಕ್ಕೆ
ಪ್ರತಿಯಾಗಿ ಅದರಲ್ಲಿ ಹೆಚ್ಚು ಪುರುಷಾರ್ಥ
ಮಾಡುವುದಕ್ಕಾಗಿ ಪ್ರೋತ್ಸಾಹ ಕೊಡುವ
ವನು ಮತ್ತು ಸ್ವತಃ ಪುರುಷಾರ್ಥಮಾಡು
ವವನು ಪುಣ್ಯಾತ್ಮನೆಂದು ತಿಳಿಯಬೇಕು.'
ತಾವು ಎಲ್ಲರಿಗೂ ಯಾವಾಗಲೂ ಧರ್ಮದ ಸೇವೆ
ಮಾಡುವುದಕ್ಕಾಗಿ ಪ್ರೋತ್ಸಾಹಿಸುವುದರಿಂದಲೇ
ಸಮಾಜದಲ್ಲಿ ಒಂದು ಪ್ರಕಾರದ ಚೈತನ್ಯವು ಕಂಡು
ಬರುತ್ತಿರುವುದು.

ಗುರುದೇವ :– ಮಹಾರಾಜರಿಗಿಂತ ಹೆಚ್ಚು ಪ್ರಭಾವ
ಶಾಲಿಯಾಗಿಯೂ ಮತ್ತು ಒಳ್ಳೆಯದನ್ನಾಗಿಯೂ
ತಾವೇ ಮಾಡುತ್ತಿರುವಿರಿ. ತಮ್ಮಲ್ಲಿ ಇಷ್ಟು ಬುದ್ಧಿ
ಚಾತುರ್ಯವೂ ಹಾಗೂ ಜನರನ್ನು ಆಕರ್ಷಿಸುವ
ಶಕ್ತಿಯೂ ಎಲ್ಲಿಂದ ಬಂದಿರಬೇಕೆಂದು ನಮಗೆ
ಆಶ್ಚರ್ಯವಾಗುತ್ತಿದೆ. ಜ್ಞಾನದ ಜೊತೆಯಲ್ಲಿ ಹಿಂದೀ
ಭಾಷೆಯ ಮೇಲೂ ತಾವು ಚನ್ನಾಗಿ ಪ್ರಭುತ್ವ
ಪಡೆದಿದ್ದೀರಿ. ಸ್ಮರಣ ಶಕ್ತಿಯಂತೂ ಸಾಕಷ್ಟು
ವಿಕಾಸವಾಗಿದೆ. ಇವೆಲ್ಲವನ್ನು ನೋಡಿ ನಮಗೆ
ಅತ್ಯಂತ ಆನಂದವೆನಿಸುತ್ತಿದೆ.

ಏಲಾಚಾರ್ಯ :- ಇದೆಲ್ಲವೂ ತಮ್ಮ ಆಶೀರ್ವಾದದ ಫಲವೇ ಇದೆ, ನಾನು ಬಾಹುಬಲಿಯಲ್ಲಿದ್ದಾಗ ತಾವು ಋಷಿಮಂಡಲ ಸ್ತೋತ್ರದ ಪಾಠ ಹಾಗೂ ಮಂತ್ರ ಕಲಿಸಿದಿರಿ ಮತ್ತು ದಿನನಿತ್ಯ ಅದಷ್ಟು ಅದರ ಜಪ ಮಾಡಲು ಹೇಳಿದ್ದಿರಿ. ಅಂದಿನಿಂದ ತುಂಬ ನಿಷ್ಠೆಯಿಂದ ಅದನ್ನು ಮಾಡುತ್ತಿದ್ದೇನೆ ಈಗಲೂ ಆ ಕ್ರಮವನ್ನು ಬಿಟ್ಟಿಯೇ ಇಲ್ಲ.

ಗುರುದೇವ :- ಉತ್ತಮ! ಒಳ್ಳೆಯದನ್ನೇ ಮಾಡುತ್ತಿದ್ದೀರಿ! ನಮಗಿದರ ಕಲ್ಪನೆಯಿರಲಿಲ್ಲ. ಅದು ಎಲ್ಲ ಲೌಕಿಕ-ಅಲೌಕಿಕ ಪ್ರಯೋಜನಗಳ ಸಿದ್ಧಿ ಮಾಡಿ ಕೊಡುವ ಮಂತ್ರವಿದೆ. ಅದರ ಆರಾಧನೆಯನ್ನು ಎಷ್ಟು ಮಾಡುತ್ತಿರೋ ಅಷ್ಟು ಕಡಿಮೆಯೇ ಇದೆ. ಣಮೋಕಾರ ಮಂತ್ರವೇನು ಇಲ್ಲವೆ ಈ ಋಷಿ ಮಂಡಲ ಮಂತ್ರವೇನು, ಯಾವುದೇ ಮಂತ್ರವನ್ನು ಪೂರ್ಣನಿಷ್ಠೆಯಿಂದ ಜಪಿಸಿದರೆ ಆತ್ಮನಲ್ಲಿರುವ ಸುಪ್ತ ಚೈತನ್ಯವು ಜಾಗೃತವಾಗದೆ ಇರಲಾರದು.

ಏಲಾಚಾರ್ಯ :- ಇದರ ಒಳ್ಳೆಯ ಅನುಭವವು ನಿತ್ಯವೂ ಬರುತ್ತಿದೆ. ಮನಸ್ಸು ಏಕಾಗ್ರವಾಗಲೂ ಹಾಗೂ ಚಿತ್ತಕ್ಕೆ ಶಾಂತಿ ಸ್ವಾಸ್ಥ್ಯಗಳು ಲಭಿಸಲು ಮಂತ್ರಗಳ ಜಪವು ತುಂಬಾ ಉಪಯೋಗವಾಗುತ್ತದೆ. ಇದರ ಸಾಧನೆಯು ಆತ್ಮ ವಿಕಾಸಕ್ಕೆ ಪ್ರೇರಕವೂ ಹಿತಕರವೂ ಎನಿಸಿದೆ.

ಗುರುದೇವ :– ಇದು ಸತ್ಯವಿದೆ. ಪ್ರತಿಯೊಂದು ಆತ್ಮವು ಅನಂತ ಶಕ್ತಿಯುಕ್ತವಿದೆ, ಶಕ್ತಿಯ ಅಪೇಕ್ಷೆಯಿಂದ ಜಿನಸ್ವರೂಪವಿದೆಯೆಂಬುದರ ತಿಳುವಳಿಕೆಯ ಅನುಭವವು ಬರಲಿಕ್ಕೆ ಇದೇ ಸುಲಭವಾದ ಉಪಾಯವಾಗಿದೆ. ಆದರೆ ಇದರ ತತ್ತ್ವವು ಮೊದಲು ಸರಿಯಾಗಿ ಲಕ್ಷದಲ್ಲಿ ಬರಬೇಕಾಗುತ್ತದೆ.

ಘಟ ಘಟ ಅಂತರ ಜಿನ ವಸೆ, ಘಟ ಘಟ ಅಂತರ ಜೈನ ।
ಮತ–ಮದಿರಾಕೆ ಪಾನಸೆ, ಮತವಾಲಾ ಸಮುಝೈ ನ ॥

ಪ್ರತಿಯೊಂದು ಶರೀರದಲ್ಲಿ ಅನಂತಶಕ್ತಿ ಸ್ವರೂಪಿಯಾದ 'ಜಿನ'ನ- ಆತ್ಮನ ನಿವಾಸವಿದೆ. ಮತ್ತು ಈ ಅರ್ಥದಿಂದ ಜಗತ್ತಿನ ಪ್ರತಿಯೊಂದು ಜೀವವು 'ಜೈನ'ವಿದೆ; ಆದರೆ ತಮಗಿದರ ಪರಿಚಯವಿಲ್ಲ. ಮತವೆಂಬ ಮದ್ಯವನ್ನು ಕುಡಿದು ಉನ್ಮತ್ತವಾದ ಮನಸ್ಸಿಗೆ ಇದರ ಜ್ಞಾನ ಹೇಗಾಗುವುದು ?

ನಿಲಾಚಾರ್ಯ :– ಪರಿಪೂರ್ಣ ಸತ್ಯವಿದೆ. ಇದೆಷ್ಟು ವ್ಯಾಪಕವಾದ ವಿಚಾರವಿದೆ !

ಗುರುದೇವ :– ಪ್ರತಿಯೊಂದು ಜೀವವು ಹೇಗೆ 'ಜಿನರೂಪ'ವಿದೆ ಹಾಗೆ ಪ್ರತಿಯೊಂದು ಅಕ್ಷರವೂ 'ಜಿನವಾಣಿ'ಯಾಗಿದೆ.

ಜಹಾಂ ತಹಾಂ ಜಿನವಾಣಿ ಫೈಲೀ,ಲಖೈ ನ ಸೋ
ಜಾಕೀ ಮತಿ ಮೈಲೀ ।
ಜಾಕೆ ಸಹಜ ಬೋಧ ಉತ್ಪಾತಾ, ಸೋ ತತ್ಕಾಲ
ಲಖೆ ಯುಹ ಬಾತಾ ॥

ಅಕ್ಷರ–ಅಕ್ಷರಗಳಲ್ಲಿ ಜಿನವಾಣಿಯು ವ್ಯಾಪಿಸಿ ಕೊಂಡಿವೆ; ಆದರೆ ದೃಷ್ಟಿಯು ಮೋಹಮಲದಿಂದ ಮಲಿನಗೊಂಡಿದೆ, ಹೊಲಸಾಗಿದೆ, ಅದರಿಂದಲೇ ಆದಕ್ಕೆ ಪ್ರತಿಯೊಂದು ಜೀವದಲ್ಲಿರುವ ಈ ಜಿನರೂಪ ವಾಗಲಿ ಹಾಗೂ ಅಕ್ಷರಗಳಲ್ಲಿರುವ ಜಿನವಾಣಿಯಾಗಲಿ ಕಾಣುವದಿಲ್ಲ, ತಿಳಿಯುವದಿಲ್ಲ, ಭೇದವಿಜ್ಞಾನದಿಂದ ಯಾರಿಗೆ ವಸ್ತು-ಸ್ವರೂಪದ ಜ್ಞಾನವಾಗಿದೆ ಅವರೇ ಈ ಸಂಗತಿಯನ್ನು ಸುಲಭದಲ್ಲಿ ತಿಳಿಯುವ ಸಾಧ್ಯತೆ ಯಿದೆ.

ನಿಲಾಚಾರ್ಯ :– ಇದು ತುಂಬಾ ಸುಂದರವೂ' ಮಾರ್ಮಿಕವೂ ಆದ ವಚನವಿದೆ. ಇಂಥ ಸೂಕ್ಷ್ಮವೂ' ವ್ಯಾಪಕವೂ ಆದ ದೃಷ್ಟಿಯು ಮತ್ತೆಲ್ಲೂ ದೊರಕ ಲಾರದು.

ಗುರುದೇವ :– ಭೈಯ್ಯಾ ಭಗವತಿದಾಸನು ತನ್ನ ಪರ ಮಾತ್ಮ ಭಾವನೆಯಲ್ಲೂ ಇದನ್ನೇ ಹೇಳಿದ್ದಾನೆ;–

ಜೋ ಪರಮಾತಮ ಸಿದ್ಧ ಮೇ, ಸೋಹೀಯಾ
ತನ ಮಾಹಿಂ ।

ಮೋಹ-ಮೈಲ ದೃಗಿಂಗಿ ರಹ್ಯೋ, ತಾತೈ
ಸೂಝೈ ನಾಹಿಂ ॥

ಯಾವ ಪರಮಾತ್ಮ-ಸ್ವಭಾವವು ಸಿದ್ಧಾವಸ್ಥೆಯಲ್ಲಿ ಪ್ರಕಟವಾಗುತ್ತದೆ ಅದೇ ಈ ಶರೀರದಲ್ಲಿ ಇಂದೂ ಶಕ್ತಿಸ್ವರೂಪದಿಂದ ವಿದ್ಯಮಾನವಿದೆ. ಆದರೆ ಮೋಹಜನ್ಯವಾದ ದೃಷ್ಟಿದೋಷದಿಂದ ಅದು ನಮಗೆ ಕಾಣುವದಿಲ್ಲ, ತಿಳಿಯುವದಿಲ್ಲ.

ಏಲಾಚಾರ್ಯ :- ಮಹಾರಾಜರೇ, ತಾವು ಸುಭಾಷಿತಗಳ ಭಾಂಡಾರವೇ ಆಗಿದ್ದೀರಿ. ಅವನ್ನು ಕೇಳಿದಷ್ಟು ಕಡಿಮೆಯೇ ಎನಿಸುತ್ತದೆ. ನಾನು ಬಾರಾಮತಿಯಿಂದ ಶ್ರೀ ಭೀಸೀಕರ ಗುರುಗಳಿಗೆ ಒಂದು ವಿಶೇಷಸಂದೇಶ ಕಳುಹಿಸಿಕೊಟ್ಟಿದ್ದೆ ಮತ್ತು ಪ್ರತ್ಯಕ್ಷ ಭೆಟ್ಟಿಯಾದಾಗಲೂ ಅವರಿಗೆ ಹೀಗೆ ಹೇಳಿದ್ದೆ- ನಾನು ಬಾಹುಬಲಿಗೆ ಬಂದಾಗ ನನ್ನನು ಮಹಾರಾಜರ ಹತ್ತಿರ ನಿಶ್ಚಿಂತವಾಗಿರಲು ಬಿಡಿರಿ, ಮನಸೋಕ್ತವಾಗಿ ಮಾತನಾಡಲು [illegible] ಎಂದರೂ ಈ ಜನರು ಇಲ್ಲಿಯೂ ಕಾರ್ಯಕ್ರಮಗಳನ್ನೇ ಹಾಕಿಕೊಂಡಿದ್ದಾರೆ.

ಮಾ. ಭೀಸೀಕರ :- ಮಹಾರಾಜರೇ, ದರ್ಶನಕ್ಕೆಂದು ಬರುವವರಾದರೂ ಕೇಳಬಹುದಲ್ಲ! ತಾವು ಇರುವಲ್ಲಿ ಸಾಗರದ ಹಾಗೆ ಜನಸಮೂಹವು ಬೆನ್ನಹಿಂದೆ ಒತ್ತಿ ಬರುತ್ತಿದೆ ಮತ್ತು ಅವರಿಗೆ ತಮ್ಮ ಕಡೆಯಿಂದ ಏನ

ನ್ನಾದರೂ ಕೇಳಬೇಕೆಂದೆನಿಸುತ್ತದೆ ಅದಕ್ಕೆ ನಾವೇನು ಮಾಡುವ ಸಾಧ್ಯತೆಯಿದೆ?

ಗುರುದೇವ :– ಇದು ಸತ್ಯವೇ ಆಗಿದೆ. ಅದಕ್ಕಾಗಿಯೇ ತಾವು ಇನ್ನು ಮುಂದೆ ಇದೇ ಭಾಗದಲ್ಲಿ ಹೆಚ್ಚು ಕಾಲ ಇರಬೇಕೆಂದು ನಾವನ್ನುತ್ತಿರುವುದು.

ಏಲಾಚಾರ್ಯ :– ಧ್ಯಾನ ಮಾಡುವುದಕ್ಕಾಗಿ ಈ ಸ್ಥಳವು ತುಂಬಾ ಒಳ್ಳೆಯದಿದೆ ಸುತ್ತಲೂ ಹೆಚ್ಚು ಸಂಖ್ಯೆಯಲ್ಲಿ ಜೈನ ಶ್ರಾವಕರಿರುವ ಊರುಗಳಿವೆ, ಇಲ್ಲಿಯ ನೀರೂ, ಹವೆಯೂ ಅನುಕೂಲವಾಗಿವೆ. ಉತ್ತರದಲ್ಲಂತೂ ಬೇಸಿಗೆಯಲ್ಲಿ ಹೆಚ್ಚು ಬಿಸಿಲಿದ್ದರೆ ಚಳಿಗಾಲದಲ್ಲಿ ಸಾಕಷ್ಟು ಚಳಿಯಿರುತ್ತದೆ ರಾಜಸ್ಥಾನದ ಒಕ್ಕಲಿಗರು ಬೇಸಿಗೆಯ ಕಾಲದಲ್ಲಿ ನೀರಿನಲ್ಲಿ ಅಕ್ಕಿಯನ್ನು ತೊಳೆದು ಬಟ್ಟೆಯಲ್ಲಿ ಕಟ್ಟಿ ಮರಳಿನಲ್ಲಿ ಮುಚ್ಚಿಡುತ್ತಾರೆ. ಅದರಿಂದ ಸ್ವಲ್ಪಸಮಯದಲ್ಲಿ ಅನ್ನವೇ ಸಿದ್ಧವಾಗುತ್ತದೆ ಅಲ್ಲಿ ಅನ್ನ ಮಾಡಬೇಕಾದರೆ ಒಲೆ ಹೊತ್ತಿಸುವ ಅವಶ್ಯಕತೆಯೇ ಬೀಳುವುದಿಲ್ಲ.

ಗುರುದೇವ :– ಆ ದೃಷ್ಟಿಯಿಂದ ನೋಡಿದರೆ ಈ ಪ್ರದೇಶವು ಸಮಶೀತೋಷ್ಣವಿದ್ದು ತ್ಯಾಗಿಗಳ ವಿಹಾರಕ್ಕೆ ತುಂಬಾ ಅನುಕೂಲವಾಗಿದೆ.

ಮಹಾಬಲಮಹಾರಾಜ :– ಎಂತಲೇ ಆಚಾರ್ಯರುಗಳಾಗಲಿ, ಮುನಿಗಣವಾಗಲಿ ದಕ್ಷಿಣದಲ್ಲಿಯೇ ಹೆಚ್ಚು

ಸಂಖ್ಯೆಯಲ್ಲಿ ಆಗಿದ್ದಾರೆ. ಎಲ್ಲ ತೀರ್ಥಂಕರರು ಮಾತ್ರ ಉತ್ತರದಲ್ಲಿ ಆಗಿದ್ದಾರೆ.

ಏಲಾಚಾರ್ಯ :– ಮತ್ತು ವಿದ್ವಾಂಸ ಹಾಗೂ ಪಂಡಿತರು ಹೆಚ್ಚಾಗಿ ಮಧ್ಯಭಾರತದಲ್ಲಿ ಅದರಲ್ಲೂ ಹೆಚ್ಚಾಗಿ ಬುಂದೇಲಖಂಡದಲ್ಲಿ ಆಗಿದ್ದಾರೆ. ಹೀಗೆ ಇದು ಮೂರು ಪ್ರಕಾರದ ಸಂಗಮವಿದೆ, ನಿಯೋಗವಿದೆ. ದಕ್ಷಿಣದ ಆಚಾರ್ಯರು ತಮ್ಮ-ತಮ್ಮ ಕಾಲಗಳಲ್ಲಿ ವಿವಿಧ ಗ್ರಂಥಗಳನ್ನು ಬರೆಯುದಿದ್ದಿದ್ದರೆ, ಮತ್ತು ವಿದ್ವಾಂಸರು ಅವುಗಳ ಪರಿಶೀಲನೆಮಾಡಿ ಇಂದಿನ ಭಾಷೆಗಳಲ್ಲಿ ರೂಪಾಂತರ ಮಾಡದೆ ಇರುತ್ತಿದ್ದರೆ, ತೀರ್ಥಂಕರರೆಂದರೆ ಯಾರು? ಅವರ ಸ್ವರೂಪವೇನು, ಕಾರ್ಯವೇನು?– ಇವು ನಮಗೆ ತಿಳಿಯುತ್ತಿರಲಿಲ್ಲ. ತಿರ್ಥಂಕರರೇನೋ ಉತ್ತರದಲ್ಲಾದರು ಆದರೆ ಅವರುಗಳ ಚರಿತ್ರೆಯನ್ನು ಬರೆದವರು ದಕ್ಷಿಣದ ಆಚಾರ್ಯರುಗಳು !

ಗುರುದೇವ ಃ– ಮಧ್ಯಕಾಲದಲ್ಲಿ ತಲೆದೋರಿದ ಭೀಕರವಾದ ಬರಗಾಲದಲ್ಲಿ ಕೊನೆಯ ಶ್ರುತಕೇವಲಿಗಳಾದ ಶ್ರೀ ಭದ್ರಬಾಹುಗಳು ತಮ್ಮ ಹಲವಾರು ಶಿಷ್ಯರೊಡನೆ ಉತ್ತರದಿಂದ ದಕ್ಷಿಣ ದೇಶಕ್ಕೆ ಬಂದರೆಂದೇ ಈ ಭಾಗದಲ್ಲಿ ಧರ್ಮವು ಸ್ಥಿರವಾಗಿ ಉಳಿಯಿತು. ಜೊತೆಗೆ ದಿಗಂಬರ ಸಂಸ್ಕೃತಿಯ ಪರಂಪರೆಯೂ ಅಖಂಡವಾಗಿ ಉಳಿಯಿತು. ಆದರೆ ಈಗದು ತುಂಡಾಗುತ್ತಲಿದೆ,

ಅದನ್ನು ದುರ್ಲಕ್ಷಿಸಲಾಗುತ್ತಿದೆ. ಆದಕ್ಕಾಗಿ ತಮ್ಮಂಥವರು ತಮ್ಮ ಸಂಯೋಗವನ್ನು ಈ ಭಾಗ ದಲ್ಲಿ ಹೆಚ್ಚಾಗಿ ನೀಡಬೇಕು. ಎಂದರೆನೇ ಧರ್ಮದ ವಿಷಯದಲ್ಲಿರುವ ಈ ಭಾಗದ ಅಜ್ಞಾನವು ದೂರ ವಾಗಲೂ ಸಹಾಯವಾಗಬಹುದು.

ಪಲಾಚಾರ್ಯ :– ಮಹಾರಾಜರೇ, ತಮ್ಮ ಬಹು ಕಾಲದ ವಾಸ್ತವ್ಯದಿಂದ ಮತ್ತು ಹಲವಾರು ಗುರು ಕುಲಗಳನ್ನು ಪ್ರಾರಂಭಿಸಿರುವುದರಿಂದ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಧರ್ಮಕ್ಕೆ ಒಂದು ರೀತಿಯ ಚೈತನ್ಯವು ದೊರಕುತ್ತಲಿದೆ. ಅದೆಷ್ಟೋ ಯುವಕರು ತಮ್ಮ ಸಾನ್ನಿಧ್ಯದಲ್ಲಿದ್ದು ಶಿಕ್ಷಣ ಪಡೆಯು ವುದರಿಂದ ಧರ್ಮಾಭಿಮುಖರಾಗಿದ್ದಾರೆ, ಆಗುತ್ತ ಲಿದ್ದಾರೆ. ವಿಹಾರ ಮಾಡುತ್ತಿರುವಾಗ ನಮಗೆ ಅಲ್ಲಲ್ಲಿ ಅನುಭವಬಂದಿದೆ. ನಾಶಿಕ–ಗಜಪಂಥಗಳಲ್ಲಿ ಸಮೀಪ ದಲ್ಲಿರುವ ವಿಮಾನ ನಿಲ್ದಾಣದಿಂದ ಕೆಲವು ಯುವ ಕರು ದರ್ಶನಕ್ಕೆ ಬಂದಿದ್ದರು. ಅವರ ಪರಿಚಯ ಕೇಳಿ ದಾಗ ಎಷ್ಟೋ ಜನರು 'ನಾವು ಕಾರಂಜಾ ಆಶ್ರಮದ ವಿದ್ಯಾರ್ಥಿಗಳೆಂದರೆ ಎಷ್ಟೋ ಜನರು ನಾವು ಬಾಹು ಬಲಿ ವಿದ್ಯಾಪೀಠದಲ್ಲಿ ಶಿಕ್ಷಣಪಡೆದವರೆಂದು ಅಭಿ ಮಾನದಿಂದ ಹೇಳುತ್ತಿದ್ದರು.' ಅವರ ಈ ಮಾತು ಗಳನ್ನು ಕೇಳಿ ನಮಗೆ ತುಂಬಾ ಸಂತೋಷವೆನಿಸಿತು. ಅನಂತರವೂ ಎಷ್ಟೋ ಕಡೆಗಳಲ್ಲಿ ಅನೇಕರು ಭೆಟ್ಟಿ ಯಾದರು. ಈ ಕಾರ್ಯವು ತುಂಬಾ ಬೆಲೆಯುಳ್ಳದ್ದೂ

ಶಾಶ್ವತವೂ ಆಗಿದೆ. ಇದು ಹೀಗೆಯೇ ವೃದ್ಧಿಸಲೆಂದು ಆಶಿಸುವೆ.

ಗುರುದೇವ :– ಆದರೆ ಇದಕ್ಕೆ ತಮ್ಮ ಪ್ರತ್ಯಕ್ಷ ಸಹಕಾರ ಬೇಡವೆ? ಕೇವಲ ಭಾವನೆಯನ್ನು ವ್ಯಕ್ತ ಮಾಡಿದ ಮಾತ್ರಕ್ಕೆ ಹೇಗೆ ಸಾಗೀತು?

ಏಲಾಚಾರ್ಯ :– (ಶ್ರೋತೃಗಳತ್ತ ದೃಷ್ಟಿಹರಿಸಿ) ಮಹಾರಾಜರು ತಮ್ಮ ಮೂಲೋದ್ದೇಶವನ್ನು ಬಿಡಲು ಸಿದ್ಧರಿಲ್ಲ. ಧರ್ಮ ಹಾಗೂ ಸಮಾಜೋನ್ನತಿಗಾಗಿ ಅದೆಷ್ಟು ಕಳವಳ! ಅದೆಷ್ಟು ಪ್ರಯತ್ನ! (ಮಹಾರಾಜರತ್ತ ಹೊರಳಿ)ಮಹಾರಾಜರೇ, ಧರ್ಮದ ಬಗೆಗಿರುವ ತಮ್ಮ ತಳಮಳ ಹಾಗೂ ಪ್ರಯತ್ನವು ಮೊದಲಿನಿಂದಲೂ ಪರಿಚಯವಿದೆ. ತಾವು ಕ್ಷುಲ್ಲಕ ಅವಸ್ಥೆಯಲ್ಲಿದ್ದಾಗ ಒಮ್ಮೆ ಪ್ರವಾಸ ಹೊರಟಾಗ 'ನೀರಾ' ಎಂಬ ರೈಲು ನಿಲ್ದಾಣದಲ್ಲಿ ತಮ್ಮ ಹಾಗೂ ಕರ್ಮವೀರ ಭಾವೂರಾವ ಪಾಟೀಲ ಅವರ ಭೆಟ್ಟಿಯಾಗಿತ್ತು. ಆಗ ತಮ್ಮೊಡನೆ ನಾನೂ ಇದ್ದೆನು. ಊರಲ್ಲಿರುವ ಮಂದಿರದಲ್ಲಿ ಉಳಿದುಕೊಳ್ಳಲು ಎಲ್ಲರೂ ಹೋದೆವು ಸಾಯಂಕಾಲದ ಸಾಮಾಯಿಕವಾದ ಬಳಿಕ ಶ್ರೀ ಪಾಟೀಲರೊಡನೆ ಸಮಾಜಹಿತದ ಬಗ್ಗೆ ಮಾತುಕತೆಗಳು ಪ್ರಾರಂಭವಾದವು. ಸುಮಾರು ಎಂಟುವರೆಗೆ ನನಗೆ ನಿದ್ರೆ ಬಂದಿತು ಮತ್ತು ನಾನು ಮಲಗಿಕೊಂಡೆನು. ಅನಂತರ ರಾತ್ರಿ ಒಂದು ಗಂಟೆಗೆ ನನಗೆ ಎಚ್ಚರಾಯಿತು. ಆಗಲೂ ತಮ್ಮ

ಮಾತು ಕತೆ ನಡೆದೇ ಇದ್ದವು. ಮತ್ತು ಬೆಳಗಿನ ಐದು ಗಂಟೆಯುವರೆಗೆ ಅವು ಮುಗಿಯಲೇ ಇಲ್ಲ. ಕರ್ಮ ವೀರರು ಎದ್ದು ಹೋದರು ಮತ್ತು ತಾವು ಸಾಮಾಯಿಕಕ್ಕೆ ಕುಳಿತಿರಿ. ಸಮಾಜಕಲ್ಯಾಣಕ್ಕಾಗಿ ತಮಗಿರುವ ಉತ್ಕಟೇಚ್ಛೆಗೆ ಇದೊಂದು ಸಾಕ್ಷೀಚಿತ್ರ!

ಗುರುದೇವ :– ಇಷ್ಟು ಹಳೆಯ ಸಂಗತಿಗಳು ತಮ್ಮ ಸ್ಮರಣೆಯಲ್ಲಿರುವುದೊಂದು ವಿಶೇಷತೆಯೇ ಇದೆ.

ಶ್ರೀ ತಾತ್ಯಾ :– ಈ ಮಹಾರಾಜರೆಂದರೆ ಒಂದು ಜೀವಂತ ಕಾಂಪ್ಯುಟರಾಗಿದ್ದಾರೆ. (ಎಲ್ಲರೂ ಜೋರಾಗಿ ನಗುತ್ತಾರೆ).

ಗುರುದೇವ :– ಇದು ಸತ್ಯವಾಗಿಯೇ ತೋರುತ್ತದೆ. ತಮ್ಮ ಬುದ್ಧಿ ವೈಭವವಾಗಲಿ, ಸ್ಮರಣಶಕ್ತಿಯಾಗಲಿ, ಪ್ರವಚನಶೈಲಿಯಾಗಲಿ ಎಲ್ಲವೂ ಬೇರೆಯೇ ಇವೆ, ವಿಶೇಷವೇ ಆಗಿವೆ. ತಮ್ಮ ನಿಮಿತ್ತದಿಂದಾಗಿ ಉತ್ತರದಲ್ಲಾಗಲಿ ಹಾಗೂ ಈ ವಿಹಾರದಲ್ಲಾಗಲಿ ಎಷ್ಟೊಂದು ಧರ್ಮಪ್ರಭಾವನೆಯಾಯಿತು, ಹಾಗೂ ಆಗುತ್ತಲಿದೆ. ತಮ್ಮ ಪ್ರವಚನ ಕೇಳುವುದಕ್ಕಾಗಿ ಹತ್ತಿಪ್ಪತ್ತು ಸಹಸ್ರದಷ್ಟು ಜನಸಮೂಹವು ಅಲ್ಲಲ್ಲಿ ಕೂಡುತ್ತಲಿದೆ. ಇಂಥ ಒಂದು ವಿಶೇಷವಾದ ಸಾಮರ್ಥ್ಯವು ತಮ್ಮಲ್ಲಿ ಪ್ರಾಪ್ತವಾಗಿದೆ.

ಏಲಾಚಾರ್ಯ :– ತಾವು ಹಿಂದಕ್ಕೆ ಒಂದುಸಲ ಗುಪ್ತೆಯಲ್ಲಿ ಕುಳಿತಿರುವಾಗ 'ಎಲ್ಲ ಸರ್ಪವನ್ನು ಬಿಟ್ಟರೂ ಅಡ್ಡಿಯಿಲ್ಲ ಆದರೆ ಜೈನನನ್ನು ಹೊಡೆಯಬೇಕೆಂದು ಹೇಳಲಾಗುತ್ತದೆ ಅಂಥ ಸ್ಥಳದಲ್ಲಿ ಧರ್ಮ ಪ್ರಚಾರವನ್ನು ಹೇಗೆ ಮಾಡುತ್ತೀರಿ?'—ಎಂದು ಕೇಳಿದ್ದಿರಿ. ಆಗ 'ಅಂಥ ಸ್ಥಳದಲ್ಲಿಯೂ ನಾನು ಮಾಡಿತೋರಿಸುತ್ತೇನೆ'ಂದು ಉತ್ತರ ಕೊಟ್ಟಿದ್ದೆನು. ಆ ವೇಳೆಯಲ್ಲಿ ಪೂ. ಪಾರ್ಶ್ವಮತಿ ಆರ್ಯಿಕೆ ಹಾಗೂ ಗಜಾಬೆನ್ ಮೊದಲಾದವರು ಉಪಸ್ಥಿತವಿದ್ದರು. ಉತ್ತರ ಭಾಗದ ವಿಹಾರದಲ್ಲಿ ಮತ್ತು ಉಳಿದ ಅದೆಷ್ಟೋ ಕಡೆಗಳಲ್ಲಿ ಇಂಥ ವಿರೋಧ ಭಾವನೆಯಿರುವ ಸಮಾಜದ ಮಧ್ಯದಲ್ಲಿ ಅಹಿಂಸೆ ಮತ್ತು ವಿಶ್ವಧರ್ಮದ ಬಗ್ಗೆ ನನ್ನ ಪ್ರವಚನಗಳಾದವು. ಅದನ್ನು ಕೇಳಿದ ಮೇಲೆ ಅವರು ಮೊದಲಿನ ದ್ವೇಷಭಾವನೆಯನ್ನು ಬಿಟ್ಟುಕೊಟ್ಟು ಜೈನ ತತ್ತ್ವಜ್ಞಾನವನ್ನು ತಿಳಿದುಕೊಳ್ಳುವುದಕ್ಕೆ ಉತ್ಸುಕರಾದರು ಭ. ಮಹಾವೀರರ ೨೫೦೦ ನೆಯ ನಿರ್ವಾಣ ಮಹೋತ್ಸವದಲ್ಲಂತೂ ಹೀಗೆ ಎಷ್ಟೋ ಕಡೆಗಳಲ್ಲಿ ಅನುಭವಕ್ಕೆ ಬಂದಿತು.

ಮಾ. ಭೀಸೀಕರ :– ಮಹಾರಾಜರೇ, ತಮ್ಮ ಹಿಮಾಲಯ ವಿಹಾರದಲ್ಲಿಯ ಕೆಲವು ಸ್ವಾರಸ್ಯಕರವಾದ ಅನುಭವಗಳನ್ನು ತಿಳಿಸಿರಿ ಅದನ್ನು ಕೇಳಬೇಕೆಂದು ಬಹಳಷ್ಟು ಜನರು ಉತ್ಸುಕರಾಗಿದ್ದಾರೆ.

ಹಿಮಾಲಯ ವಿಹಾರದಲ್ಲಿಯ ಕೆಲವು ಅನುಭವಗಳು

ವಿಲಾಚಾರ್ಯ :- ಅಲ್ಲಿಯ ಅನುಭವವಂತೂ ತುಂಬಾ ಒಳ್ಳೆಯದಾಗಿದೆ. ಎಲ್ಲವನ್ನು ಹೇಳುವ ಸಾಧ್ಯತೆಯಿಲ್ಲ ದಿದ್ದರೂ ಅಲ್ಪ-ಸ್ವಲ್ಪವನ್ನಾದರೂ ಹೇಳುತ್ತೇನೆ. ಹಿಮಾಲಯದತ್ತ ವಿಹಾರ ಮಾಡುವ ಮುನ್ನ ಪಾಲ ಚಂದ ಗುರುಂಗಳ ಪತ್ರದಿಂದ ಮಹಾರಾಜರ ಆಶೀ ರ್ವಾದವು ನಮಗೆ ದೊರಕಿತ್ತು. ಶ್ರೀ ಸಾಹೂ ಶಾಂತಿಪ್ರಸಾದ, ಶ್ರೀ ಶ್ರೇಯಾಂಸಪ್ರಸಾದ ಹಾಗೂ ಅವರ ಪರಿವಾರದವರೆಲ್ಲ ಸೇರಿ, ಎಲ್ಲ ರೀತಿಯಿಂದ ನಮ್ಮ ವ್ಯವಸ್ಥೆಯನ್ನು ಮಾಡಿಸಿದ್ದರು. ತುಂಬಾ ನಿಷ್ಠೆಯಿಂದ ಅವರೂ ಆಗಾಗ ಬಂದು ಆಹಾರವಿತ್ತು ಹೊಗುತ್ತಿದ್ದರು. 'ಚಕ್ರಶಿಲೆ' ಎಂಬ ಊರಲ್ಲಿ ಭ. ಪಾರ್ಶ್ವನಾಥರ ಮಂದಿರವಿದ್ದು ಅಲ್ಲಿ ಇನ್ನೂರೈವತ್ತು ಜೈನರ ಮನೆಗಳಿವೆ. ಈ ಊರು ಏಳು ಸಾವಿರ ಅಡಿ ಎತ್ತರದ ಮೇಲಿದೆ. ಮುಂದೆ 'ಕೋಡಗಾಡ' ಎಂಬ ಲ್ಲಿಯೂ ಆರೇಳು ಜೈನರ ಮನೆಗಳಿವೆ ಶ್ರೀನಗರದ ಲ್ಲಂತೂ ಬಂಗಾರವನ್ನು ಯಾವ ಕಲ್ಲಿನ ಮೇಲೆ ತಿಕ್ಕು ತ್ತಾರೋ ಅಂಥ ಕಪ್ಪು ಕಲ್ಲಿನಲ್ಲಿ ಇಡೀ ಮಂದಿರ ವನ್ನು ಕಟ್ಟಲಾಗಿದೆ. ಅಲ್ಲಿ ಒಂದು ವರ್ಷಾಯೋಗ ವನ್ನು ಕಳೆದಿದ್ದೇವೆ. ಆ ಸಮಯದಲ್ಲಿ ಸುಮಾರು

ಒಂದೂ ಮುಕ್ಕಾಲು ಲಕ್ಷ ರೂಪಾಯಿ ವ್ಯಯಿಸಿ ಆ ಮಂದಿರದ ಜೀರ್ಣೋದ್ಧಾರ ಮಾಡಿಸಲಾಯಿತು. ಧರ್ಮಶಾಲೆ ಹಾಗೂ ಹೊರಾಂಡಗಳನ್ನೂ ಕಟ್ಟಿಸಲಾಯಿತು. ಸರಕಾರದವರು ವಶಪಡಿಸಿಕೊಂಡಿದ್ದ ಭೂಮಿಯನ್ನು ಸಮಾಜದವರು ಶಾಲೆಗಾಗಿ ಮರಳಿ ಪಡೆದುಕೊಂಡರು.

ಗುರುದೇವ :– ತುಂಬಾ ಒಳ್ಳೆಯ ಕೆಲಸ ಮಾಡಿದಿರಿ. ಸಮಯಕ್ಕೆ ಸರಿಯಾಗಿ ಎಚ್ಚರವಿತ್ತಿರಿ.

ಏಲಾಚಾರ್ಯ :– 'ಕೀರ್ತಿನಗರ' ಹಾಗೂ 'ಜೋಸಿಮಠ'ಗಳಲ್ಲಿ ಜೈನರ ನಾಲ್ಕಾರು ಮನೆಗಳಿದ್ದರೆ 'ತೇಹರಿ'ಯಲ್ಲಿ ಮಾತ್ರ ನೂರೈವತ್ತು ಮನೆಗಳಿವೆ ಇಲ್ಲಿ ನದಿಯ ದಂಡೆಯಲ್ಲಿ ಭಗೀರಥ ಮುನಿಯು ತಪಶ್ಚರ್ಯ ಮಾಡಿದ ಬಗ್ಗೆ ಉಲ್ಲೇಖವು ನಮ್ಮ ಉತ್ತರ ಪುರಾಣದಲ್ಲಿ ಬರುತ್ತದೆ. ಇಂದ್ರಾಣಿಯು ಅವರ ಪೂಜೆ ಮಾಡಿದ್ದಳು. ನದಿಯ ನೀರು ಅವರ ಪಾದದ ವರೆಗೆ ಮತ್ತು ಒಮ್ಮೊಮ್ಮೆ ಅದಕ್ಕೂ ಮೇಲೆಯೂ ಬರುತ್ತಿರುವುದರಿಂದ ಮುಂದೆ ಅದಕ್ಕೆ 'ಭಾಗೀರಥಿ ನದಿ'ಯೆಂಬ ಹೆಸರು ಬಂದಿತು. ಬದ್ರೀನಾಥದ ಮುಖ್ಯ ಮಂದಿರದಲ್ಲಿ ಶ್ರೀ ವೃಷಭನಾಥ ಭಗವಂತರ ಭವ್ಯವಾದ ಮೂರ್ತಿಯಿದೆ. ಅಕ್ಕ–ಪಕ್ಕದಲ್ಲಿ ಉಳಿದ ದೇವತೆಗಳಮೂರ್ತಿಗಳೂ ಇವೆ, ಅಲ್ಲಿ ನಾಲ್ಕು ದಿವಸಗಳ ವರೆಗಿದ್ದೆವು, ತುಂಬಾ ಚಳಿಯಿ

ದ್ದರೂ ಆಲ್ಹಾದಕರವಾಗಿದೆ ದರ್ಶನ ಮಾಡುತ್ತಿರು ವಾಗ ಮನಸ್ಸಿಗಾದ ಸಂತೋಷವನ್ನು ಬಾಯಿಂದ ಹೇಳಲಿಕ್ಕಾಗದು.

ಗುರುದೇವ :- ಮೂರ್ತಿಯು ನಗ್ನ ದಿಗಂಬರವಾಗೇ ಇದೆ ಏನು?

ಏಲಾಚಾರ್ಯ :- ಸಂಪೂರ್ಣ ದಿಗಂಬರವಾಗಿದೆ. ಬೆಳಗಿನ ಅಭಿಷೇಕದ ಸಮಯದಲ್ಲಿ ಮೇಲೆ ಏನೂ ಇರುವುದಿಲ್ಲ. ಹಿಂದಿನಿಂದ ಗಂಧ-ಹೂವು ಮೊದಲಾದುವನ್ನು ಏರಿಸುತ್ತಾರೆ. ನಮ್ಮಂತೆ ಪಂಚಾಮೃತ ಅಭಿಷೇಕವನ್ನು ಕೂಡ ಮಾಡುತ್ತಾರೆ. ಸಾಧುಗಳ ಹಾಗೂ ಇತರರ ದಟ್ಟನೆಯು ಸಾಕಷ್ಟಿರುತ್ತದೆ. ಗಂಟೆಯ ನಿನಾದವು ಬಹು ದೂರದವರೆಗೆ ಹರಡುತ್ತದೆ. ಈ ಸ್ಥಾನವು ಹನ್ನೆರಡು ಸಾವಿರದಾ ಮುನ್ನೂರು ಅಡಿಗಳಷ್ಟು ಎತ್ತರದಲ್ಲಿದೆ.

ಮಾ. ಭೀಸೀಕರ :- ಇಷ್ಟು ಎತ್ತರದ ವರೆಗೆ ಹೋಗಬೇಕಾದರೆ ತುಂಬಾ ತೊಂದರೆ ಯಾಗಿರಬೇಕು ?

ಏಲಾಚಾರ್ಯ :- ತೊಂದರೆಯೇನೋ ಆಗುತ್ತದೆ ! ಆದರೆ ಅದರೊಡನೆ ಇನ್ನೊಂದು ರೀತಿಯಿಂದ ಆನಂದವನ್ನೂ ಸವಿಯಲು ದೊರಕುತ್ತದೆ. ಮಧ್ಯದಲ್ಲಿ ಕೆಲವೊಂದು ಭಾಗವು ಅತ್ಯಂತ ಕಠಿಣವೂ ಇಕ್ಕಟ್ಟಾದುದೂ ಆಗಿದೆ. ಅಲ್ಲಿ ಕೇವಲ ಒಬ್ಬೊಬ್ಬರೇ ಹೋಗ

ಬಹುದಾಗಿದೆ. ಒಂದು ಸ್ಥಳದಲ್ಲಿ ನಾವು ಸುಮಾರು ಇಪ್ಪತ್ತು ಇಪ್ಪತ್ತೈದರಷ್ಟು ಜನರು ಏರುತ್ತಿದ್ದೆವು, ಅಷ್ಟರಲ್ಲಿ ಎದುರಿನಿಂದ ಸುಮಾರು ಹದಿನೈದು ಇಪ್ಪತ್ತರಷ್ಟು ಹೇಸರಗತ್ತೆಗಳು ಬೆನ್ನಮೇಲೆ ಭಾರ ವನ್ನು ಹೊತ್ತುಕೊಂಡು ಮೇಲಿಂದ ಕೆಳಗೆ ಇಳಿಯು ತ್ತಿದ್ದವು. ತುಂಬಾ ಇಕ್ಕಟ್ಟಾದ ದಾರಿಯಲ್ಲಿ ನಾವಾ ಗಲಿ ಇಲ್ಲವೆ ಹೇಸರಗತ್ತೆಗಳಾಗಲಿ ಒಬ್ಬೊಬ್ಬರಾಗಿಯೇ ಹೋಗಬಹುದಾಗಿತ್ತು. ಹಿಂದೆ ಮರಳಿಹೋಗಬೇಕೆಂ ದರೆ ಒಂದು ಒಂದೂವರೆ ಮೈಲಿನಷ್ಟು ಹೋಗ ಬೇಕು. ಒಂದೆಡೆ ಉತ್ತುಂಗ ಪರ್ವತದ ಶ್ರೇಣಿಯಿ ದ್ದರೆ ಇನ್ನೊಂದೆಡೆ ಆಳವಾದ ಕಂದರವಿತ್ತು ಇಂಥ ಸಂದರ್ಭದಲ್ಲಿ ಕೇವಲ ಯುಕ್ತಿಯಿಂದಲೇ ಕೆಲಸ ಮಾಡಿಕೊಳ್ಳಬೇಕಿತ್ತು. ನಾನು ಪರ್ವತದ ಕಡೆಗೆ ಪರ್ವತಕ್ಕೆ ಮೆತ್ತಿ ನಿಂತುಕೊಂಡೆನು. ಉಳಿದವರು ಒಂದೊಂದಡಿ ಅಂತರಬಿಟ್ಟು ಬೋರಲು ಮಲಗಿ ದರು, ಕತ್ತೆಗಳು ಸರಿಯಾಗಿ ಒಬ್ಬೊಬ್ಬರನ್ನು ದಾಟುತ್ತ ಕೆಳಗಿಳಿದು ಹೋದವು. ಆಗ ನಾವು ಬಿಡು ಗಡೆಯ ಉಸಿರು ಹಾಕಿದೆವು.

ನಾ. ಭೀಸೀಕರ :- ನಿತ್ಯದ ಅನುಭವದಿಂದ ಮೂಕ ಪ್ರಾಣಿಗಳೂ ಕೂಡ ಶಿಸ್ತಿನ ಪಾಠವನ್ನು ಕಲಿಯು ತ್ತವೆ.

ವಿಲಾಚಾರ್ಯರ :- ಒಂದೆಡೆಯಲ್ಲಿ ವಿದ್ಯಾರ್ಥಿಗಳ

ತವ್ಮ ಪುಸ್ತಕಗಳ ಜೊತೆಯಲ್ಲಿ ದಾರಿಯೊಳಗೆ ದೊರೆಯುವ ಚಿಕ್ಕ-ಪುಟ್ಟ ಕಟ್ಟಿಗೆಗಳನ್ನು ಆಯ್ದುಕೊಂಡು ಹೋಗುತ್ತಿರುವುದು ಕಾಣಿಸಿತು. 'ಇವನ್ನು ಏತಕ್ಕಾಗಿ ಒಯ್ಯುತ್ತಿದ್ದೀರಿ' ಎಂದು ಕೇಳಲು ಗುರುಗಳಿಗೆ ವೇನೆಯಲ್ಲಿ ಒಲೆ ಹೊತ್ತಿಸಲಿಕ್ಕೆ ಉಪಯೋಗ ಬೀಳುತ್ತವೆಂದು ಆ ವಿದ್ಯಾರ್ಥಿಗಳು ಉತ್ತರಕೊಟ್ಟರು. ಹಿಮಾಚ್ಛಾದಿತವಾದ ಪ್ರದೇಶದಲ್ಲಿ ಎಂಥ ವಸ್ತುವೂ ದುರ್ಲಭವೇ ಸರಿ! ಆ ವಿದ್ಯಾರ್ಥಿಗಳ ನಿರಾಕುಲವಾದ ನಗೆಮೊಗ ಮತ್ತು ಗುರುಗಳ ಸೇವೆ ಮಾಡುವ ಮಧುರ ಮನೋಭಾವನೆಯನ್ನು ನೋಡಿ ಮನಸ್ಸಿಗೆ ತುಂಬಾ ಆನಂದವಾಯಿತು. ಇಂಥ ಹೃದಯಂಗಮವಾದ ಅದೆಷ್ಟೋ ಅನುಭವಗಳು ಆ ವಿಹಾರದಲ್ಲಿ ಬಂದಿವೆ.

ನಾ. ಭೀಸೀಕರ :– ಹಿಮಾಲಯದಲ್ಲಿ ಅದೆಷ್ಟೋ ಸಾಧು ನಿವಾಸಗಳಿವೆ. ಅವರ ಭೆಟ್ಟಿಯೂ ಆಗಿರಬೇಕು ?

ಏಲಾಚಾರ್ಯ :– ಎಲ್ಲೆಡೆಯಲ್ಲೂ ಆಗಿದೆ. ಒಂದೆಡೆಯಲ್ಲಂತೂ ಏಳೆಂಟುನೂರು ಸಾಧು ಸಮೂಹದಲ್ಲಿ ರಾಮಾಯಣದ ಮೇಲೆ ನಮ್ಮ ಪ್ರವಚನವಾಯಿತು. ಅಲ್ಲಿ ಹೋದಾಗ ಸಾಧುಗಳೆಲ್ಲರೂ ಎರಡೂ ಮಗ್ಗುಲು ಎದ್ದು ನಿಂತು ಆದರದಿಂದ ಸ್ವಾಗತಮಾಡಿದ್ದರು. ಆ ಸಾಧುಗಳ ಪ್ರಮುಖನು ತನ್ನ ಭಾಷಣದಲ್ಲಿ 'ಇಂದು

ನಮ್ಮಲ್ಲಿ ಒಬ್ಬ ಪರಮಹಂಸರು, ಶ್ರೇಷ್ಠ ಋಷಿಗಳೇ ಬಂದಿದ್ದಾರೆ ಅವರ ಜೀವನಾದರ್ಶವು ಅನುಕರಣೆ ಯವಾಗಿದೆ ಅಂಥವರ ಉಪದೇಶವನ್ನು ತಾವೆಲ್ಲರೂ ಲಕ್ಷಕೊಟ್ಟು ಕೇಳಬೇಕು'—ಎಂದು ಹೇಳಿದ್ದರು.

ಇನ್ನೊಂದುವೇಳೆಯಲ್ಲಿ ಒಮ್ಮೆ ಕೆಲವು ಮೌಲ್ವಿಗಳ ಭೆಟ್ಟಿಯಾದರು. ಅವರೊಡನೆ ಚರ್ಚೆ ಮಾಡುತ್ತಿರು ವಾಗ ಕೆಲವು ಮಹತ್ವದ ಮಾತುಗಳು ಲಕ್ಷ್ಯದಲ್ಲಿ ಬಂದವು. ನಾವು ಮಂತ್ರದಲ್ಲಿ ಯಾವ 'ಹ್ರೀ' ಎನ್ನು ತ್ತೇವೆ ಅದನ್ನೇ ಉಚ್ಚಾರ ಸೌಕರ್ಯಕ್ಕಾಗಿ ಅವರು '**ರಹೀಮು**' ವೆನ್ನುತ್ತಾರೆ '**ಕ್ಲೀಮ್**'ದ ರೂಪವನ್ನು '**ಕರೀಮು**'ವನ್ನಾಗಿ ಮಾಡಿದ್ದಾರೆ. ನಮ್ಮಲ್ಲಿ 'ಚತ್ತಾರಿ ಮಂಗಲ' 'ಚತ್ತಾರಿ ಲೋಗುತ್ತಮ'ಗಳ ಪಾಠಗಳು ಹೇಗಿವೆ ಅದೇ ರೀತಿಯಿಂದ ಅವರಲ್ಲಿ 'ನಮಾಜ'ದೊ ಳಗೆ'**ಮಂಗಲ ಲೋಗುತ್ತಮ ಹಾಗೂ ಶರಣ**' ಈ ಶಬ್ದಗಳಿವೆ. ಅವರ '**ನಮಾಜ**' ಶಬ್ದವು ಕೂಡ ನಮ್ಮಲ್ಲಿಯ '**ನಮಃ**' ಶಬ್ದದಿಂದಲೇ ನಿರ್ಮಾಣವಾ ಗಿದೆ. '**ನಮಃ**' ಎಂದರೆ **ನಮಸ್ಕಾರ** ನಮಾಜದಲ್ಲಿ ಕೂಡ ಇದೇ ಕ್ರಿಯೆಯು ಇದೆ '**ಕುರಾಣ**' ಶಬ್ದವೂ ಕೂಡ 'ಪುರಾಣ'ದ ಅರ್ಥಕ್ಕೇ ಹೊಂದಿಕೆಯಾಗು ತ್ತದೆ. 'ಕು'ಎಂದರೆ 'ಪ್ರಥ್ವಿ'. ಸಂಪೂರ್ಣ ಪ್ರಥ್ವಿಯು ಜಗತ್ತಿನ ಜ್ಞಾನವು ಯಾವುದರಲ್ಲಿದೆ ಅದು 'ಕುರಾ ಣವು; ಮತ್ತು ಜಗತ್ತಿನೊಳಗಿನ ಆದರ್ಶ ಪುಣ್ಯ— ಪುರುಷರ ಜೀವನ–ಚರಿತ್ರೆ ಮತ್ತು ಅದರ ಹಿನ್ನೆಲೆಯು

ತತ್ತ್ವಜ್ಞಾನವು ಯಾವುದರಲ್ಲಿ ವರ್ಣಿಸಲ್ಪಟ್ಟಿದೆ ಅದು 'ಪುರಾಣ'ವು.

ಇವೆಲ್ಲವುಗಳ ಮೇಲಿಂದ ಪ್ರಾಚೀನ ಭಾರತೀಯ ಸಂಸ್ಕೃತಿಯ ಪ್ರಭಾವವು ಅರಬ, ಇರಾಣ ಮೊದಲಾದ ರಾಷ್ಟ್ರಗಳ ಮೇಲೆ ಎಷ್ಟು ಬಿದ್ದಿತ್ತೆಂಬುದರ ಅರಿವು ಉಂಟಾಗುತ್ತದೆ. ಇಸ್ವಿಸನ್ ಪೂರ್ವದ ಸಂವತ್ಸರ ಇಪ್ಪತ್ತೈದು-ಮೂವತ್ತನೆಯ ವರ್ಷದಲ್ಲಿ ಮದ್ರಾಸಿನಿಂದ ಕೆಲವು ದಿಗಂಬರ ಮುನಿಗಳು ರೋಮಕ್ಕೆ ಹೋದ ಉಲ್ಲೇಖವು 'ಅರಬ ರಾಷ್ಟ್ರಗಳ ಮೇಲೆ ಭಾರತೀಯ ಸಂಸ್ಕೃತಿಯ ಪ್ರಭಾವ' ಎಂಬ ಪುಸ್ತಕದಲ್ಲಿ ದೊರಕುತ್ತದೆ ಈ ಗ್ರಂಥದ ಲೇಖಕರು ಒಬ್ಬ ಮಹಮ್ಮದೀಯ ವಿದ್ವಾಂಸರೇ ಆಗಿದ್ದಾರೆ.

ಗುರುದೇವ :- ಆಶ್ಚರ್ಯವಿದೆ ! ಎಷ್ಟು ಸೂಕ್ಷ್ಮತರವಾದ ಸಂಗತಿಗಳನ್ನು ತಾವು ಸಂಗ್ರಹಿಸಿಕೊಂಡಿದ್ದೀರಿ ಮತ್ತು ಯೋಗ್ಯ ಸಮಯದಲ್ಲಿ ಅದರ ಉಪಯೋಗ ಮಾಡುತ್ತಿರುವುದೊಂದು ವಿಶೇಷತೆಯೇ ಆಗಿದೆ. ಇಷ್ಟು ವಿಶಾಲವೂ ಆಳವೂ ಆದ ಅಭ್ಯಾಸಮಾಡುವುದಕ್ಕೆ ತಮಗೆ ವೇಳೆಯಾದರೂ ಹೇಗೆ ಸಿಗುತ್ತದೆ, ಯಾವಾಗ ಸಿಗುತ್ತದೆ ?

ವಿಲಾಚಾರ್ಯ :- ಇಚ್ಛೆ ಮತ್ತು ದೃಷ್ಟಿಗಳಿದ್ದರೆ ಎಲ್ಲವೂ ಆಗುತ್ತವೆ. ಎಲ್ಲಿ ಯಾವುದು ಉಪಯೋಗ

ವೆನಿಸುತ್ತದೆ ಅಲ್ಲಿಂದ ಅದನ್ನು ಬರೆದಿಟ್ಟುಕೊಳ್ಳುವ ಅಭ್ಯಾಸವೊಂದು ಮೊದಲಿನಿಂದಲೂ ಇದೆ. ಆವಶ್ಯಕ ವೆನಿಸಿದಾಗ ಅದರ ಉಪಯೋಗ ಮಾಡಿಕೊಳ್ಳು ತ್ತಿರುತ್ತೇನೆ.

ಮಾ. ಭಿಸೀಕರ :– ಇಂಥ ಸಂಗತಿಗಳನ್ನು ಬರೆಯುಲ್ಪ ಟ್ಟಂಥ ಆದೆಷ್ಟೋ ವಹಿಗಳು ಮಹಾರಾಜರ ಹತ್ತಿರ ವಿವೆ. ಅದೊಂದು ಸುಂದರವಾದ ಸಂಕಲನವಾಗಿದೆ. ಮಹಾರಾಜರ ದಿಕ್ಷೆಯು ವಾಸ್ತವ್ಯದಲ್ಲಿ ನನಗೆ ನೋಡಲು ದೊರೆತವು.

ಏಲಾಚಾರ್ಯ :– ಇನ್ನೂ ಒಂದು ಆಶ್ಚರ್ಯದ ಸಂಗತಿಯೆಂದರೆ ನಾನು ಎಲ್ಲ ಧರ್ಮಗಳಲ್ಲಿಯ ಜಪ ಮಾಲೆಗಳನ್ನು ಒಂದುಗೂಡಿಸಿ ಅವರ ವಿವಿಧ ಪ್ರಕಾ ರದ ಜಪಮಂತ್ರಗಳನ್ನು ನೋಡಿದೆನು ಎಲ್ಲರ ಮಣಿ ಗಳು ನೂರೆಂಟೇ ಇದ್ದದ್ದು ಕಂಡುಬಂತು. ಮತ್ತು ಮಂತ್ರದಲ್ಲಿ ಕೂಡ ಸಾಕಷ್ಟು ಸಾಮ್ಯತೆ ಕಂಡುಬಂತು. ಅಲ್ಲದೆ ಎಲ್ಲರಲ್ಲೂ ಸಾಮಾನ್ಯವಾಗಿ 'ಓಂ' ಕಾರ ದಿಂದಲೇ ಪ್ರಾರಂಭವಾಗುತ್ತಿರುವಂತೆ ಕಂಡುಬರು ತ್ತದೆ.

ಗುರುದೇವ :– ಉತ್ತಮ ! ಇದೊಂದು ವಿಶೇಷವೇ ಇದೆ !

ಏಲಾಚಾರ್ಯ :– ನಮ್ಮ ಧರ್ಮ ತತ್ತ್ವಗಳಲ್ಲಿರುವ ವಿಶಾಲವಾದ ದೃಷ್ಟಿಕೋಣ ಹಾಗೂ ಅದರಿಂದ

ಇತರರ ಮೇಲಾದ ಪ್ರಭಾವ, ಅವರ ಮೇಲಾದ ಆಳವಾದ ಪರಿಣಾಮಗಳನ್ನು ನಾವಿನ್ನೂ ಸರಿಯಾಗಿ ತಿಳಿದುಕೊಂಡಿಲ್ಲ, ಅಭ್ಯಾಸ ಮಾಡಿಲ್ಲ. ನಿಷ್ಪಕ್ಷವಾದ ದೃಷ್ಟಿಯಿಂದ ಅವೆಲ್ಲವುಗಳ ಅಭ್ಯಾಸವಾದರೆ ಅದೆಷ್ಟೋ ತಥ್ಯವು ಕೈಗೆ ಬರಬಹುದು ಮತ್ತು ಅದರಿಂದಾಗಿ ನಮ್ಮಲ್ಲಿರುವ ಧರ್ಮಶ್ರದ್ಧೆಯೂ ದೃಢವಾಗಬಹುದು, ಆಚಾರ—ವಿಚಾರಗಳಲ್ಲಿಯೂ ಪರಿವರ್ತನೆಯಾಗಬಹುದು, ನಿಜಕ್ಕೂ ಜೀವನದ ಮಟ್ಟವು ಎತ್ತರವಾಗಬಹುದು– ಇವೆಲ್ಲವುಗಳಾಗುವುದು ಅತ್ಯಂತ ಆವಶ್ಯಕವಾಗಿದೆ.

ಗುರುದೇವ :– ತಾವನ್ನುವುದು ಸರಿಯಾಗಿದೆ! ಇದಕ್ಕಾಗಿಯೇ ಯಾವಾಗಲೂ ಸ್ವಾಧ್ಯಾಯ ಮತ್ತು ತತ್ತ್ವಚಿಂತನೆಯ ಆವಶ್ಯಕತೆಯಿದೆ. ಇಂದಿನ ವಿಷಮ ಪರಿಸ್ಥಿತಿಯಲ್ಲಿ ಮನಸ್ಸಿಗೆ ಸುಖ-ಶಾಂತಿಗಳು ಲಭಿಸಬೇಕಾದರೆ ಇದೊಂದೇ ಸಾಧನೆಯಾಗಿದೆ.

[ಆ ಹೊತ್ತಿಗೆ ಚರ್ಚೆಗೆಂದು ನಿರ್ಣಯಿಸಲ್ಪಟ್ಟ ಸಮಯವು ತೀರಿ ಹೋಗಿತ್ತು ಜೊತೆಗೆ ಪ್ರವಚನ ಸಮಯವು ಕಾದುನಿಂತಿತ್ತು. ಅದಕ್ಕಾಗಿ ಅನಿವಾರ್ಯವಾಗಿ ಈ ಚರ್ಚೆಯನ್ನು ಮುಕ್ತಾಯಗೊಳಿಸಲೇ ಬೇಕಾಯಿತು. ಹೀಗಾಗಿ ಪರಮ ಪೂಜ್ಯ ಏಲಾಚಾರ್ಯ ಶ್ರೀ ವಿದ್ಯಾನಂದರು ತಮ್ಮ ಮುಂದಿನ

ಪ್ರಯಾಣಕ್ಕೆ ಆಜ್ಞೆ ಪಡೆವ ಅಪೇಕ್ಷೆಯಿಂದ ಹೀಗನ್ನುತ್ತಾರೆ.)

ಏಲಾಚಾರ್ಯ :- ಪೂಜ್ಯಶ್ರೀಯವರೇ, ಇನ್ನು ನಾನು ಪ್ರವರ್ತಕನವಾದಕೂಡಲೆ ಜಯಸಿಂಗ ದ್ದರದತ್ತ ಪ್ರಸ್ಥಾನ ಬೆಳೆಸುತ್ತೇನೆ. ಪುನಃ ದರ್ಶನಕ್ಕೆ ಬರುವುದು ಆಗುವದಿಲ್ಲ. ಶ್ರವಣಬೆಳಗೊಳದಲ್ಲಿಯು ಶ್ರೀ ಭಗವಾನ್ ಗೊಮ್ಮಟದೇವರ ಸಹಸ್ರಾಬ್ದಿಯ ಮಹಾಮಸ್ತಕಾಭಿಷೇಕದ ಸಮಯದಲ್ಲಿ ತಮ್ಮ ಆಗಮನವಾಗುತ್ತಿದ್ದರೆ ಬಹಳೇ ಆನಂದವಾಗುತ್ತಿತ್ತು. ಆದರೆ ತಮ್ಮ ಈ ಅವಸ್ಥೆಯಲ್ಲಿ ಅದು ಸಾಧ್ಯವಿಲ್ಲದಾಗಿದೆ, ಮತ್ತು ಉಚಿತವೂ ಅಲ್ಲ. ಆದರೂ ಈ ಮಹೋತ್ಸವವು ಸಾಫಲ್ಯಪೂರ್ವಕವಾಗಿ ನೆರವೇರಬೇಕಾದರೆ ತಮ್ಮ ಶುಭಾಶೀರ್ವಾದ ಬೇಕೇಬೇಕು.

ಗುರುದೇವ :- ಸಂಪೂರ್ಣ ಆಶೀರ್ವಾದವಂತೂ ಇದ್ದೇ ಇದೆ. ಮತ್ತು ಅದು ನಿರಂತರದ ಸಂಗವಾಗಿಯೂ ಇದೆ. ತಾವು ಎಲ್ಲಿ ಇರುತ್ತೀರಲ್ಲ ಮಹಾರಾಜರು ಇಲ್ಲವೇನು? ಬೇರೆ ಅಸ್ತಿತ್ವದ ಆವಶ್ಯಕತೆಯೇನಿದೆ? ಎಲ್ಲರ ಸದ್ಭಾವನೆಗಳೂ ತಮ್ಮನ್ನು ಬೆಂಬಲಿಸಿವೆ. ಅಲ್ಲದೆ ತಮ್ಮ ಪುರುಷಾರ್ಥ ಮತ್ತು ಆ ಪುರುಷಾರ್ಥಕ್ಕೆ ಸಾತಿಶಯ ಪುಣ್ಯದ ನೆರವು ಹಾಗೂ ಶ್ರೀ ಭಟ್ಟಾರಕರುಗಳು, ಶ್ರೀ ಸಾಹು ಅವರು, ಶ್ರೀ ಲಾಲಚಂದ ಅವರುಗಳಾದಿಯಾಗಿ ಎಲ್ಲರ ಸಹಕಾರವೂ ಇರುವಾಗ ಕಾರ್ಯವು ಸಫಲವಾಗುವುದರಲ್ಲಿ

ಯಾವ ಸಂದೇಹವೂ ಇಲ್ಲ.

ಆದರೆ ಮಹೋತ್ಸವದ ನಂತರ ಮಾತ್ರ ತಮ್ಮ ಆಗಮನವು ಪುನಃ ಈ ಭಾಗದಲ್ಲಿ ಆಗಬೇಕು. ಈ ಭಾಗದ ಜನರ ಅಜ್ಞಾನವನ್ನು ದೂರಮಾಡುವುದರಲ್ಲಿ ತಮ್ಮ ಸಹಕಾರವು ಹೆಚ್ಚು ಹೆಚ್ಚಾಗಿ ಲಭಿಸಬೇಕೆಂದು ಮಹಾರಾಜರಿಗೆ ಪುನಃ ಪುನಃ ಅನಿಸುತ್ತಿದೆ. ಮತ್ತು ಶ್ರವಣಬೆಳಗೊಳದ ಹಾಗೆಯೇ ಉಳಿದ ಕ್ಷೇತ್ರಗಳ ಸಂರಕ್ಷಣೆ-ಸಂವರ್ಧನೆಗಳತ್ತ ತಮ್ಮ ಪೂರ್ಣ ಲಕ್ಷ ವಿರಬೇಕು. ಈ ಕಾರ್ಯವು ಕೇವಲ ಆರ್ಯನಂದಿ ಮಹಾರಾಜರ ಅಥವಾ ಮಹಾಬಲ ಮಹಾರಾಜರ ದೆಂದು ತಿಳಿಯಬೇಡಿ. ಅವರಂತೂ ತಮ್ಮ ಶಕ್ತಿಗನು ಸರಿಸಿ ಮಾಡುತ್ತಲೇ ಇದ್ದಾರೆ,ಆದರೂ ತಮ್ಮಂಥವರ ಶಕ್ತಿಯೂ ಆ ಕಾರ್ಯಕ್ಕೆ ತೊಡಗಬೇಕು. ಅಂದ ರೆನೇ ಸಂಸ್ಕೃತಿ-ರಕ್ಷಣೆಯು ಹಾಗೂ ಸಂವರ್ಧನೆಯು ಈ ಪ್ರಚಂಡ ಕಾರ್ಯವು ಪ್ರಗತಿಪಥದಲ್ಲಿಳಿದೀತು, ಅದಾದರೂ ಅಷ್ಟೇ ಮಹತ್ವದ್ದಿದೆ, ಅತ್ತ ತಮ್ಮ ಪೂರ್ಣವಾದ ಲಕ್ಷ್ಯವಿರಬೇಕು.

ಏಲಾಚಾರ್ಯ :– ಇರುತ್ತದೆ, ಖಂಡಿತವಾಗಿಯೂ ಇರುತ್ತದೆ. ಈ ವಿಷಯದಲ್ಲಿ ತಾವು ಪೂರ್ಣ ನಿಶ್ಚಿಂತ ವಾಗಿರಬೇಕು. ಮಹೋತ್ಸವವು ಮುಗಿದ ನಂತರ ಇತ್ತಕಡೆಗೇ ಬರುವ ಮನಸ್ಸಿದೆ.

ಹೀಗನ್ನುತ್ತ ತುಂಬಾ ಭಾವಪೂರ್ಣವಾದ ಅಂತಃ ಕರಣದಿಂದ ವಂದನೆ ಮಾಡುತ್ತ ಅವರು ನಿರೋಪ ಪಡೆದರು ಗುರುದೇವರೂ ಪ್ರತಿ ವಂದನೆ ಮಾಡುತ್ತ ಅತ್ಯಂತ ಪ್ರಸನ್ನ ಚಿತ್ತದಿಂದ ಬೀಳ್ಕೊಟ್ಟರು. 'ತಮ್ಮ ನೇತೃತ್ವದಲ್ಲಿ ಗೊಮ್ಮಟೇಶ್ವರರ ಮಹಾಮಸ್ತಕಾಭಿ ಷೇಕದ ಮಹೋತ್ಸವವು ಹೆಚ್ಚು ಧರ್ಮಪ್ರಭಾವನೆ ಯೊಡನೆ ಪೂರ್ಣ ಸಾಫಲ್ಯದೊಡನೆ ಪೂರ್ತಿಯಾಗಲಿ, ಮತ್ತು ಇಂಥ ಅತಿಶಯವಾದ ಪ್ರಭಾವನೆಗಳು ತಮ್ಮ ನಿಮಿತ್ತದಿಂದಾಗಿ ಎಲ್ಲೆಡೆಗೂ ಅಖಂಡವಾಗಿ ನಡೆಯುತ್ತಿರಲಿ!- ಎಂದು ಪೂ. ಶ್ರೀ ಗುರುದೇವರು ಆಶೀರ್ವದಿಸಿದರು.

ಗುರುವರ್ಯರ ಉಪದೇಶಾಮೃತ

ಸಂಘ ಜೀವನದಲ್ಲಿ, ಇತರರ ಕ್ರೂರ ಮಾತುಗಳನ್ನು ಸಹಿಸಿಕೊಳ್ಳಬೇಕು. ಯಾರನ್ನೂ ಅವಮಾನಿಸಕೂಡದು. ಯಾರೊಂದಿಗೂ ಒಣ ಜಗಳವನ್ನಾಗಲಿ, ವ್ಯರ್ಥ ದ್ವೇಷವನ್ನಾಗಲಿ ಕಟ್ಟಿಕೊಳ್ಳಕೂಡದು.

ಪುಣ್ಯಹೀನನಾದ ಮನುಷ್ಯನಿಗೆ ಅನೇಕ ವಿಧದಿಂದ ಧರ್ಮೋಪದೇಶ ಮಾಡಿದರೂ ಧರ್ಮದಲ್ಲಿ ಪ್ರೀತಿಯುಂಟಾಗಲಾರದು. ಪುಣ್ಯಾತ್ಮರಿಗೆ ಪರಮೋಪದೇಶಾದಿಗಳಿಲ್ಲದೆಯೇ ಸ್ವತಃ ಧರ್ಮದಲ್ಲಿ ಅಭಿರುಚಿಯು ಉಂಟಾಗುತ್ತದೆ. ಆದ್ದರಿಂದ ತನ್ನಾತ್ಮನೇ ತನಗೆ ಗುರುವೆಂದು ನಿಶ್ಚಯಿಸಿಕೊಳ್ಳಬೇಕು.

ಮಾಂಸಾಹಾರದಿಂದ ದರ್ಪವು ಉಂಟಾಗುತ್ತದೆ; ಮದ್ಯಪಾನ ಮಾಡಿದವನು ಜೂಜಾಟಕ್ಕೆ ಪ್ರವೃತ್ತನಾಗುತ್ತಾನೆ. ಹೀಗೆ ಮನುಷ್ಯನು ಸಕಲ ದುಶ್ಚಟಗಳಿಗೆ ಬಲಿ ಬೀಳುತ್ತಾನೆ; ಆದ್ದರಿಂದ ಇವುಗಳನ್ನು ತ್ಯಜಿಸಬೇಕು.

ಕಾಲದ ಮಹತ್ವವನ್ನು ತಿಳಿದುಕೊಂಡು ಮಾಡುವ ಕೆಲಸವನ್ನು ಈಗಲೇ ಮಾಡಬೇಕು. ವಿಲಂಬವೇ ಸಾವು ಜಾಗೃತಿಯೇ ಜೀವನ.

ಇಲ್ಲಿ ನಾನು ಒಳ್ಳೆಯ ಬಾಳನ್ನು ಅನುಭವಿಸಬೇಕು. ಮುಂದೆ ಈ ಲೋಕದ ಋಣ ತೀರಿದ ಮೇಲೆ ಒಳ್ಳೆಯ ಗತಿ ದೊರೆಯಬೇಕು, ಎಂಬ ಭಾವನೆ ಮಾಡಬೇಕು.

ಜೈನರು ಜೈನರೆಂದೆನಿಸಿಕೊಂಡು ಬಾಳುವದಿದ್ದರೆ ಅವರಿಗೆ ದಿನಾಲು ದೇವದರ್ಶನ, ಧರ್ಮ ಗ್ರಂಥಗಳ ಸ್ವಾಧ್ಯಾಯ ವನ್ನು ಅವಶ್ಯವಾಗಿ ಮಾಡಬೇಕೆಂದು ಹೇಳಬೇಕಾಗಿದೆ ಮನುಷ್ಯನಿಗೆ ತನ್ನ ಜೀವನದಲ್ಲಿ ಶಾಂತಿ ಹಾಗೂ ಸಮಾ ಧಾನಗಳು ದೊರೆಯಬೇಕಾದರೆ ಇದೇ ಒಂದು ಶ್ರೇಷ್ಠ ಸಾಧನೆಯಾಗಿದೆ.

ಯಾರಾದರೂ ಅಜ್ಞಾನದಿಂದ ಏನನ್ನೇ ಆಡಿದರೂ ಅತ್ತ ಲಕ್ಷಕೊಡದೆ ಒಂದು ಕರ್ತವ್ಯ ದೃಷ್ಟಿಯನ್ನೇ ಮುಂದಿಟ್ಟು ಕೊಂಡು ನಡೆಯುವದೇ ಮಹತ್ವವಿದೆ. ಉದಾರವಾದ ಅಂತಕರಣಕ್ಕೆ ಇದೊಂದು ಒಳ್ಳೆಯ ಸಾಕ್ಷಿಯಾಗಿದೆ.

ಪ್ರತಿಯೊಂದು ಜೀವವು ಹೇಗೆ 'ಜಿನರೂಪ'ವಿದೆ ಹಾಗ ಪ್ರತಿಯೊಂದು ಅಕ್ಷರವೂ 'ಜಿನವಾಣಿ' ಯಾಗಿದೆ.

ಹಿತಕರವಾದ ಯಾವುದೇ ಒಳ್ಳೆಯ ಸಂಗತಿಯ ಬಗ್ಗೆ ಅಲ್ಪ ಸಂತೋಷಿಯಾದವನಿಗೆ ಪ್ರಮಾದಿಯೆನ್ನುತ್ತಾರೆ. ಅವನನ್ನು ಪಾಪಿಯೆಂದು ತಿಳಿಯಬೇಕು; ಇದಕ್ಕೆ ಪ್ರತಿ ಯಾಗಿ ಅದರಲ್ಲಿ ಹೆಚ್ಚು ಪುರುಷಾರ್ಥ ಮಾಡುವದಕ್ಕಾಗಿ ಪ್ರೋತ್ಸಾಹ ಕೊಡುವವನು ಮತ್ತು ಸ್ವತಃ ಪುರುಷಾರ್ಥ ಮಾಡುವವನು ಪುಣ್ಯಾತ್ಮನೆಂದು ತಿಳಿಯಬೇಕು.

ಈ ವರ್ತಮಾನ ಕಾಲದಲ್ಲಿ ಸ್ವಾಧ್ಯಾಯವೊಂದು ಶ್ರೇಷ್ಠ ತರವಾದ ಅಮೃತವಾಗಿದೆ. ಅದರ ಸ್ವಾದವು ಅದನ್ನು ಕುಡಿಯುವವರಿಗೆ ಬರುವುದು !

***

ಸನ್ಮತಿ ಪ್ರಕಾಶನದ ಪ್ರಕಟನೆಗಳು

೧) ಅಮರ ಕಥೆಗಳು (ಅಪ್ರಾಪ್ಯ) ೧-೫೦
– ವಿಂಜೆ ಅಣ್ಣಾರಾಯರು

೨) ತ್ರಿಲೋಕ ಮತ್ತು ಚಂದ್ರಗ್ರಹ (ಅಪ್ರಾಪ್ಯ) ೧-೨೫
– ಬಳವಂತ ಗೋವಿಂದ ಖೋತ

೩) ಭ. ಮಹಾವೀರ ಉಪದೇಶ ಪರಂಪರೆ ೨-೫೦
– ಎಸ್. ಪಿ. ಪಾಟೀಲ

೪) ನೀತಿಸಾರ ಸಮುಚ್ಚಯ ೧-೦೦
– ಪದ್ಮರಾಜ ನೇ. ಶಾಸ್ತ್ರಿ

೫) ವಿಶ್ವತೀರ್ಥ ಶ್ರವಣಬೆಳ್ಗೊಳ ೪-೫೦
– ಎ. ಟಿ. ಮುನ್ನೊಳ್ಳಿ ಮತ್ತು
ಡಾ॥ ಬಿ. ಟಿ. ಮುನ್ನೊಳ್ಳಿ

೬) ಅಪೂರ್ವ ಭೆಟ್ಟಿ ೧-೫೦
– ಎಂ. ಬಿ. ಪಾಟೀಲ

೭) ಭಾರತೀ ತತ್ವಮಾಲೆ ೨-೦೦
– ಮನೋರಮಾ ಮ. ಪಾಟೀಲ

೮) ಉದ್ಬೋಧನ (ಅಚ್ಚಿನಲ್ಲಿದೆ)